ಪಟ್ಟಣ ಸಹಕಾರ



# ಬ್ಯಾಂಕಿಂಗ್ ಪ್ರಪಂಚ

ಪಟ್ಟಣ ಸಹಕಾರ ಬ್ಯಾಂಕುಗಳ ತ್ರೈಮಾಸಿಕ

ಸಂಪುಟ : 14
ಸಂಚಿಕೆ : 2
ಏಪ್ರಿಲ್ / ಮೇ / ಜೂನ್ 2026
ಪುಟಗಳು : 44



## ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ **ಡಿ.ಕೆ. ಶಿವಕುಮಾರ್** ಹಾಗೂ ಉಪ ಮುಖ್ಯಮಂತ್ರಿಯಾಗಿ **ಜಿ. ಪರಮೇಶ್ವರ** ಅವರುಗಳಿಂದ ಪ್ರಮಾಣ ವಚನ ಸ್ವೀಕಾರ






ಎರಡೂವರೆ ದಶಕಗಳ ಸಾರ್ಥಕ ಸೇವೆಯಲ್ಲಿ ಮಹಿಳೆಯ ಆರ್ಥಿಕ, ಸಾಮಾಜಿಕ ಸಬಲೀಕರಣದಲ್ಲಿ ಕರ್ನಾಟಕ ಮಹಿಳಾ ಸಹಕಾರ ಬ್ಯಾಂಕ್ ನಿ., ಚಿಕ್ಕಮಗಳೂರು



ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ ನಡೆದು ಬಂದ ದಾರಿ



ಮಹಿಳಾ ಕೋ-ಆಪರೇಟಿವ್ ಬ್ಯಾಂಕ್ ಲಿ., ಶೇಷಾದ್ರಿಪುರಂ, ಬೆಂಗಳೂರು - ಬೆಳವಣಿಗೆಯ ಹಾದಿ

ದಿನಾಂಕ : 16.03.2026 ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಕೆ.ಎಚ್. ಪಾಟೀಲ ಅವರ 101ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಉದ್ಘಾಟಿಸಿದರು. ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್, ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಂ. ವೀರಪ್ಪ ಮೊಯ್ಲಿ, ಮಾನ್ಯ ವಿಧಾನಪರಿಷತ್ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿ, ಮಾನ್ಯ ವಿಧಾನಸಭಾಧ್ಯಕ್ಷರಾದ ಶ್ರೀ ಯು.ಟಿ. ಖಾದರ, ಸಚಿವರುಗಳಾದ ಶ್ರೀ ಎಚ್. ಕೆ. ಪಾಟೀಲ, ಶ್ರೀ ಕೆ.ಎಚ್. ಮುನಿಯಪ್ಪ, ಶ್ರೀ ಎಸ್. ಎಸ್. ಬೋಸರಾಜು, ಡಾ. ಶರಣಪ್ರಕಾಶ ಪಾಟೀಲ, ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ ರವರುಗಳು ಉಪಸ್ಥಿತರಿದ್ದರು.



---



ದಿನಾಂಕ : 27.02.2026 ರಂದು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಮಹಿಳಾ ನಿರ್ದೇಶಕರುಗಳಿಗೆ ಹಾಗೂ ಮಹಿಳಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಏರ್ಪಡಿಸಿದ್ದ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ ರವರು ಉದ್ಘಾಟಿಸಿದರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಡಾ. ವೀರುಪಾಕ್ಷಿ ಪೂಜಾರಹಳ್ಳಿ, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಉಪಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್.ಕಿರೇಸೂರ ಉಪಸ್ಥಿತರಿದ್ದರು.

---

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ನಿರ್ದೇಶಕ ಮಂಡಳಿ ಸದಸ್ಯರುಗಳಿಗೆ ದಿನಾಂಕ:24.04.2026ರಂದು ಮಹಾಮಂಡಳದ ಕೆ.ಎಚ್. ಪಾಟೀಲ ಸಭಾಂಗಣದಲ್ಲಿ ಏರ್ಪಡಿಸಿದ್ದ ಒಂದು ದಿನದ ವಿಚಾರ ಸಂಕಿರಣವನ್ನು ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯರವರು ಉದ್ಘಾಟಿಸಿದರು. ಈ



ಸಂದರ್ಭದಲ್ಲಿ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಎಂ.ಆರ್.ವೆಂಕಟೇಶ್, ಶ್ರೀ ಎಸ್.ಎಂ.ಸುರೇಶ್, ಶ್ರೀ ಎಂ.ಎಂ.ಮೆಟಗುಡ್ಡ, ಶ್ರೀ ಷಣ್ಮುಖಪ್ಪ ಮುಚ್ಚಂಡಿ, ಶ್ರೀಮತಿ ಬನಶಂಕರಿ ಹೆಚ್.ಆರ್., ಶ್ರೀ ಆನಂದಗೌಡ ಎನ್. ಬಿರಾದಾರ, ವಿಶೇಷ ಆಹ್ವಾನಿತರಾದ ಶ್ರೀ ಶಿವರಾಮಗೌಡ, ಶ್ರೀ ಎಣ್ಣೆಗೆರೆ ಆರ್. ವೆಂಕಟರಾಮಯ್ಯ, ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಚಂದ್ರಮೌಳಿ ಎಸ್., ಶ್ರೀ ಅಂಬೋರೆ ಪಿ. ಸತೀಶ್, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್. ಕಿರೇಸೂರ ರವರು ಉಪಸ್ಥಿತರಿದ್ದರು.

ಸಂಪಾದಕೀಯ



ಆತ್ಮೀಯ
ಸಹಕಾರಿ
ಬಂಧುಗಳೇ...

▸▸ ಎಚ್.ಕೆ. ಪಾಟೀಲ

# ದೇಶದ ಆರ್ಥಿಕತೆ ಬೆಳವಣಿಗೆಯ ಅಂಕಿಅಂಶಗಳಾಚೆಗಿನ ವಾಸ್ತವ ಚಿತ್ರಣ

ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಇತ್ತೀಚೆಗೆ ದೇಶದ ಆರ್ಥಿಕತೆ ಶೇ.7.7ರಷ್ಟು ಜಿಡಿಪಿಯೊಂದಿಗೆ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿದೆ ಎಂದು ಹೆಮ್ಮೆಯಿಂದ ಹೇಳಿದ್ದಾರೆ. ನಿಜ, ಅವರೇ ಹೇಳುವಂತೆ ಜಿಡಿಪಿ ಬೆಳವಣಿಗೆಯಾಗಿದೆ ಹಾಗೂ ಮೂಲಸೌಕರ್ಯ ಹೂಡಿಕೆ ಮತ್ತು ಡಿಜಿಟಲ್ ಆರ್ಥಿಕತೆಯ ವಿಸ್ತರಣೆಯಂತಹ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದೆ. ಆದರೆ, ದೇಶದ ಆರ್ಥಿಕ ಸ್ಥಿತಿಗತಿಗಳನ್ನು ಕೇವಲ ಜಿಡಿಪಿ ಬೆಳವಣಿಗೆಯ ಆಧಾರದ ಮೇಲೆ ಅಳೆಯುವುದರಿಂದ ವಾಸ್ತವ ಚಿತ್ರಣ ದೊರೆಯುವುದಿಲ್ಲ ಅಲ್ಲವೇ?

ಜಿಡಿಪಿ ಬೆಳವಣಿಗೆ ಆದರೆ ಸಾಕೇ? ವಿಶ್ವದ ಪ್ರಮುಖ ಆರ್ಥಿಕತೆಗಳ ಪೈಕಿ ವೇಗವಾಗಿ ಬೆಳೆಯುತ್ತಿರುವ ದೇಶಗಳಲ್ಲಿ ಒಂದಾಗಿರುವುದಕ್ಕೆ, ಸೇವಾ ವಲಯ, ಉತ್ಪಾದನಾ ವಲಯ ಮತ್ತು ಸಾರ್ವಜನಿಕ ಹೂಡಿಕೆಗಳು ಈ ಬೆಳವಣಿಗೆಗೆ ಕಾರಣವಾಗಿವೆ. ಆದಾಗ್ಯೂ, ಈ ಬೆಳವಣಿಗೆಯ ಫಲಗಳು ಸಮಾಜದ ಎಲ್ಲ ವರ್ಗಗಳಿಗೂ ಸಮಾನವಾಗಿ ತಲುಪುತ್ತಿವೆಯೇ ಎಂಬ ಪ್ರಶ್ನೆ ಹಾಕಿಕೊಂಡರೆ, ದೇಶದ ಯುವಜನತೆ ಎದುರಿಸುತ್ತಿರುವ ನಿರುದ್ಯೋಗ ಸಮಸ್ಯೆ ಎದುರಾಗುತ್ತದೆ. ಉನ್ನತ ಶಿಕ್ಷಣ ಪಡೆದ ಲಕ್ಷಾಂತರ ಯುವಕರು ಉದ್ಯೋಗಕ್ಕಾಗಿ ಅಲೆದಾಡುತ್ತಿದ್ದಾರೆ. ಸಣ್ಣ ಪುಟ್ಟ ಸರ್ಕಾರದ ಹುದ್ದೆಗಳಿಗೆ ಲಕ್ಷಾಂತರ ಅರ್ಜಿಗಳು ಸಲ್ಲಿಕೆಯಾಗುತ್ತಿರುವುದು ಉದ್ಯೋಗಾವಕಾಶಗಳ ಕೊರತೆಯನ್ನು ತೋರಿಸುತ್ತದೆ. ಜಿಡಿಪಿ ಬೆಳೆಯುತ್ತಿದ್ದರೂ ಉದ್ಯೋಗ ಸೃಷ್ಟಿಯ ಪ್ರಮಾಣ ನಿರೀಕ್ಷಿತ ಮಟ್ಟದಲ್ಲಿಲ್ಲ ಎನ್ನುವುದನ್ನು ಇದು ಎದ್ದು ತೋರಿಸುತ್ತದೆ.

ಇನ್ನೊಂದೆಡೆ, ಅಗತ್ಯ ವಸ್ತುಗಳು, ಆಹಾರ ಪದಾರ್ಥಗಳು, ತರಕಾರಿ, ಅಡುಗೆ ಎಣ್ಣೆ ಮತ್ತು ಇಂಧನ, ಜೀವ ರಕ್ಷಕ ಔಷಧಿಗಳ ಬೆಲೆಗಳ ಏರಿಕೆಯಿಂದ ಜನಸಾಮಾನ್ಯರ ಜೀವನ ವೆಚ್ಚವೂ ಹೆಚ್ಚಾಗುತ್ತಿದ್ದು, ಅವರ ಆದಾಯದಲ್ಲಿ ತಿಂಗಳ ಖರ್ಚು ವೆಚ್ಚಗಳನ್ನು ನಿಭಾಯಿಸುವುದು ಕಷ್ಟಕರವಾಗಿ ಪರಿಣಮಿಸಿದೆ. ರೈತರ ಆದಾಯ ದ್ವಿಗುಣಗೊಳಿಸುವ ಗುರಿ ಹಲವು ವರ್ಷಗಳಿಂದ ಜಾರಿಯಲ್ಲಿದ್ದರೂ, ಕೃಷಿ ಉತ್ಪಾದನಾ ವೆಚ್ಚ, ಹವಾಮಾನ ವೈಪರೀತ್ಯ, ನೀರಿನ ಸಮಸ್ಯೆ ಮತ್ತು ಮಾರುಕಟ್ಟೆಯ ಅಸ್ಥಿರತೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ದೇಶದ ಆರ್ಥಿಕ ಬೆಳವಣಿಗೆಯ ಲಾಭಗಳು ಹೆಚ್ಚಿನ ಪ್ರಮಾಣದಲ್ಲಿ ಮೇಲ್ವರ್ಗ ಮತ್ತು ದೊಡ್ಡ ಕಾರ್ಪೊರೇಟ್ ಸಂಸ್ಥೆಗಳ ಕಡೆ ಕೇಂದ್ರೀಕೃತವಾಗಿವೆ. ಇದರಿಂದಾಗಿ ಸಿರಿವಂತರ–ಬಡವರ ನಡುವಿನ ಆರ್ಥಿಕ ಅಸಮಾನತೆ ಹೆಚ್ಚುತ್ತಿರುವುದು ಮುಂದಿನ ದಿನಗಳಲ್ಲಿ ಸಾಮಾಜಿಕ ಸವಾಲಾಗಿ ಪರಿಣಮಿಸಲಿದೆ.

ಈ ಎಲ್ಲವನ್ನು ಒಟ್ಟಾರೆಯಾಗಿ ಗಮನಿಸಿದರೆ; ದೇಶದ ಆರ್ಥಿಕ ಬೆಳವಣಿಗೆಯನ್ನು ಬರಿ ಅಂಕಿಅಂಶಗಳ ಮೂಲಕ ಅಳೆಯುವುದಲ್ಲ. ಜನರ ಜೀವನಮಟ್ಟ, ಉದ್ಯೋಗಾವಕಾಶಗಳು, ರೈತರ ಆರ್ಥಿಕ ಸ್ಥಿತಿ ಮತ್ತು ಖರೀದಿ ಸಾಮರ್ಥ್ಯದ ಆಧಾರದ ಮೇಲೆ ಮೌಲ್ಯಮಾಪನ ಮಾಡಬೇಕಾಗಿದೆ. ಆರ್ಥಿಕ ಬೆಳವಣಿಗೆಯ ನಿಜವಾದ ಅರ್ಥವೆಂದರೆ ಅದರ ಫಲಗಳು ಸಮಾಜದ ಎಲ್ಲ ವರ್ಗಗಳಿಗೂ ತಲುಪಿದಾಗ ಮಾತ್ರ ಎಂದು ನನ್ನ ಪ್ರಾಮಾಣಿಕ ಅಭಿಪ್ರಾಯವಾಗಿದೆ.

ದೇಶದ ಆರ್ಥಿಕ ಬೆಳವಣಿಗೆಯ ಲಾಭಗಳು ಹೆಚ್ಚಿನ ಪ್ರಮಾಣದಲ್ಲಿ ಮೇಲ್ವರ್ಗ ಮತ್ತು ದೊಡ್ಡ ಕಾರ್ಪೊರೇಟ್ ಸಂಸ್ಥೆಗಳ ಕಡೆ ಕೇಂದ್ರೀಕೃತವಾಗಿವೆ. ಇದರಿಂದಾಗಿ ಸಿರಿವಂತರ– ಬಡವರ ನಡುವಿನ ಆರ್ಥಿಕ ಅಸಮಾನತೆ ಹೆಚ್ಚುತ್ತಿರುವುದು ಮುಂದಿನ ದಿನಗಳಲ್ಲಿ ಸಾಮಾಜಿಕ ಸವಾಲಾಗಿ ಪರಿಣಮಿಸಲಿದೆ.

## ಒಳಪುಟಗಳಲ್ಲಿ...


ಪಟ್ಟಣ ಸಹಕಾರ ಬ್ಯಾಂಕಿಂಗ್ ಪ್ರಪಂಚ

ಸಂಪುಟ : 14 ಸಂಚಿಕೆ : 2

ಪಟ್ಟಣ ಸಹಕಾರ ಬ್ಯಾಂಕುಗಳ ತ್ರೈಮಾಸಿಕ ಪತ್ರಿಕೆ

ಏಪ್ರಿಲ್ / ಮೇ / ಜೂನ್ 2026

**ಶ್ರೀ ಎಚ್.ಕೆ. ಪಾಟೀಲ**
ಗೌರವಾಧ್ಯಕ್ಷರು

**ಶ್ರೀ ಜಿ.ಎಸ್. ಪರಮಶಿವಯ್ಯ**
ಉಪಾಧ್ಯಕ್ಷರು

**ಶ್ರೀ ಪುಂಡಲೀಕ ಎನ್. ಕೇರೂರೆ**
ಮುಖ್ಯ ಕಾರ್ಯನಿರ್ವಹಣಾಧಿಕಾರಿ/
ಸಂಪಾದಕರು

**ಸಂಚಿಕೆ ನಿರ್ವಹಣೆ / ವಿನ್ಯಾಸ** :
ವರ್ಣ ಕಮ್ಯೂನಿಕೇಷನ್

**ಪ್ರಕಟಣೆ** :
**ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ.,**
ನಂ. 132, ಕೆ.ಎಚ್. ರಸ್ತೆ, ಬೆಂಗಳೂರು - 27

**ದೂರವಾಣಿ** :
080-22233662, 080-22279574

**ಇ-ಮೇಲ್** :
editorkubf@gmail.com

**ಅಂತರ್ಜಾಲ** : www.kubfed.com

**ಮುದ್ರಣ** : ನವರತ್ನ ಪ್ರಿಂಟರ್ಸ್, ಬೆಂಗಳೂರು.



ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಹಾಗೂ ಉಪ ಮುಖ್ಯಮಂತ್ರಿಯಾಗಿ ಜಿ. ಪರಮೇಶ್ವರ ಅವರುಗಳಿಂದ ಪ್ರಮಾಣ ವಚನ ಸ್ವೀಕಾರ ........ 5

ಸೈಬರ್ ಕ್ರೈಂ ಪ್ರಕರಣದಲ್ಲಿ ಬೆಂಗಳೂರು ದೇಶದಲ್ಲೇ ಮೊದಲ ಸ್ಥಾನ ಬೆಂಗಳೂರು ........ 7

ರೂಪಾಯಿಯ ಸಾರ್ವಕಾಲಿಕ ಕುಸಿತ ನೇರವಾಗಿ ಎಲ್ಲರ ಜೇಬೂ ಸುಡಲಿದೆ ........ 9

ಮಹಿಳೆಯರು ತಿಳಿದುಕೊಳ್ಳಬೇಕಾದ ಹಣಕಾಸು ನಿರ್ವಹಣೆ ........ 12

ಎರಡೂವರೆ ದಶಕಗಳ ಸಾರ್ಥಕ ಸೇವೆಯಲ್ಲಿ ಮಹಿಳೆಯ ಆರ್ಥಿಕ, ಸಾಮಾಜಿಕ ಸಬಲೀಕರಣದಲ್ಲಿ ಕರ್ನಾಟಕ ಮಹಿಳಾ ಸಹಕಾರ ಬ್ಯಾಂಕ್ ನಿ., ಚಿಕ್ಕಮಗಳೂರು ........ 14

ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ ನಡೆದು ಬಂದ ದಾರಿ ........ 17

ಸೈಬರ್ ವಂಚನೆ ತಡೆಯಲು ಈ 5 ಸರಳ ನಿಯಮಗಳನ್ನು ಪಾಲಿಸಿ ........ 21

ಮಹಿಳಾ ಕೋ-ಆಪರೇಟಿವ್ ಬ್ಯಾಂಕ್ ಲಿ., ಶೇಷಾದ್ರಿಪುರಂ, ಬೆಂಗಳೂರು - ಬೆಳವಣಿಗೆಯ ಹಾದಿ ........ 23

ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಕಾಯ್ದೆಯ ಪ್ರಮುಖ ಅಂಶಗಳು ........ 27

Duties and Responsibilities of Directors in Urban Cooperative Banks ........ 31

# ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಹಾಗೂ ಉಪ ಮುಖ್ಯಮಂತ್ರಿಯಾಗಿ ಜಿ. ಪರಮೇಶ್ವರ ಅವರುಗಳಿಂದ ಪ್ರಮಾಣ ವಚನ ಸ್ವೀಕಾರ



**ಬೆಂಗಳೂರು** : ಲೋಕಭವನದ ಗಾಜಿನ ಮನೆಯಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಂದ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಶ್ರೀ ಡಿ.ಕೆ. ಶಿವಕುಮಾರ್ ಹಾಗೂ ಉಪಮುಖ್ಯಮಂತ್ರಿಯಾಗಿ ಜಿ. ಪರಮೇಶ್ವರ್ ಅವರುಗಳು ಪ್ರಮಾಣವಚನ ಸ್ವೀಕರಿಸಿದ್ದಾರೆ. ಇವರೊಂದಿಗೆ ಒಟ್ಟು 13 ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಇದರೊಂದಿಗೆ ಡಿ.ಕೆ. ಶಿವಕುಮಾರ್ ಅವರನ್ನೂ ಒಳಗೊಂಡಂತೆ ಒಟ್ಟು 14 ಜನರ ಸಚಿವ ಸಂಪುಟ ರಚನೆಯಾಗಿದ್ದು, ಮುಂದಿನ ದಿನಗಳಲ್ಲಿ ಮತ್ತೆ ವಿಸ್ತರಣೆ ನಡೆಯಲಿದೆ.

ಕೆ.ಹೆಚ್. ಮುನಿಯಪ್ಪ, ಕೆ.ಜೆ. ಜಾರ್ಜ್, ಎಂ.ಬಿ. ಪಾಟೀಲ್, ರಾಮಲಿಂಗಾ ರೆಡ್ಡಿ, ಸತೀಶ್ ಜಾರಕಿಹೊಳಿ, ಕೃಷ್ಣ ಭೈರೇಗೌಡ, ಪ್ರಿಯಾಂಕ್ ಖರ್ಗೆ, ಯು.ಟಿ. ಖಾದರ್, ಈಶ್ವರ್‌ಖಂಡ್ರೆ, ಯತೀಂದ್ರ ಸಿದ್ದರಾಮಯ್ಯ, ಭೈರತಿ ಸುರೇಶ್, ಶರಣ್ ಪ್ರಕಾಶ್ ಪಾಟೀಲ್ ಅವರುಗಳು ಸಂಪುಟ ಸಚಿವರುಗಳಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಈ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ಪ್ರತಿ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ, ರಾಷ್ಟ್ರೀಯ ಕಾಂಗ್ರೆಸ್ ಕಾರ್ಯಕಾರಿಣಿ ಸದಸ್ಯ ಹಾಗೂ ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಕೇರಳಂ ಮುಖ್ಯಮಂತ್ರಿ ವಿ.ಡಿ. ಸತೀಶನ್, ಹಿಮಾಚಲಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್, ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಸೇರಿದಂತೆ ಹಲವು ಗಣ್ಯರು ಸಮಾರಂಭದಲ್ಲಿ ಪಾಲ್ಗೊಂಡರು. ಶಾಸಕರು, ಸಂಸದರು ಸೇರಿದಂತೆ ನಾನಾ ಕ್ಷೇತ್ರಗಳ ಅತಿಥಿ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಚೊಚ್ಚಲ ಸಂಪುಟ ಸಭೆಯಲ್ಲಿ ಆರು ಮಹತ್ವದ ನಿರ್ಣಯಗಳನ್ನು ಮಾಡಿದೆ. ಸರಕಾರ ಈಗಾಗಲೇ ಜಾರಿ ಮಾಡಿರುವ ಜನಕಲ್ಯಾಣದ ಗ್ಯಾರಂಟಿಗಳ ಮುಂದುವರಿಕೆ ಜತೆಗೆ, ಯುವಜನರನ್ನು ಗುರಿಯಾಗಿರಿಸಿಕೊಂಡು ಮಹತ್ವದ ಘೋಷಣೆಗಳನ್ನು ಮಾಡಿದ್ದಾರೆ. ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ಯೋಜನೆ, ಯುವಜನರಿಗೆ ಉದ್ಯೋಗ ಗ್ಯಾರಂಟಿ, ಖಾಸಗಿಯಲ್ಲೂ ಉದ್ಯೋಗ ಅವಕಾಶ, ಭಾರತ್ ಜೋಡೋ ಯುವಸಂಘ, ಭೂ ಗ್ಯಾರಂಟಿ ವಿಸ್ತರಣೆ, ರಾಜಧಾನಿ ರಸ್ತೆಗಳಿಗೆ ಹೊಳಪು ಎಂಬ ಆರು ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ.


ಡಾ. ಜಿ. ಪರಮೇಶ್ವರ್


ಕೆ.ಎಚ್. ಮುನಿಯಪ್ಪ


ಕೆ.ಜೆ. ಜಾರ್ಜ್


ಎಂ.ಬಿ. ಪಾಟೀಲ್


ರಾಮಲಿಂಗಾರೆಡ್ಡಿ


ಸತೀಶ್ ಜಾರಕಿಹೊಳಿ


ಕೃಷ್ಣ ಭೈರೇಗೌಡ


ಪ್ರಿಯಾಂಕ್ ಖರ್ಗೆ


ಯು.ಟಿ. ಖಾದರ್


ಈಶ್ವರ್ ಖಂಡ್ರೆ


ಡಾ. ಯತೀಂದ್ರ ಸಿದ್ದರಾಮಯ್ಯ


ಭೈರತಿ ಸುರೇಶ್


ಡಾ. ಶರಣಪ್ರಕಾಶ್ ಪಾಟೀಲ್

## ಯಾರಿಗೆ, ಯಾವ ಖಾತೆ?

| | |
|---|---|
| ಡಿ.ಕೆ. ಶಿವಕುಮಾರ್ | ಮುಖ್ಯಮಂತ್ರಿ ಹಣಕಾಸು, ಆಡಳಿತ ಸುಧಾರಣೆ, ಗುಪ್ತಚರ, ವಾರ್ತಾ ಇಲಾಖೆ ಮತ್ತು ಹಂಚಿಕೆಯಾಗದೆ ಉಳಿದಿರುವ ಖಾತೆಗಳು |
| ಡಾ. ಜಿ. ಪರಮೇಶ್ವರ | ಉಪ ಮುಖ್ಯಮಂತ್ರಿ, ಕಂದಾಯ (ಮುಜರಾಯಿ ಹೊರತುಪಡಿಸಿ) ಯುವಜನ ಸೇವೆ ಮತ್ತು ಕ್ರೀಡೆ |
| ಕೆ.ಎಚ್. ಮುನಿಯಪ್ಪ | ಆಹಾರ ಮತ್ತು ನಾಗರಿಕ ಪೂರೈಕೆ, ಗ್ರಾಹಕ ವ್ಯವಹಾರ |
| ಕೆ.ಜೆ. ಜಾರ್ಜ್ | ಇಂಧನ ಮತ್ತು ಪ್ರವಾಸೋದ್ಯಮ |
| ಎಂ.ಬಿ. ಪಾಟೀಲ | ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ |
| ರಾಮಲಿಂಗಾರೆಡ್ಡಿ | ಜಲ ಸಂಪನ್ಮೂಲ |
| ಸತೀಶ ಜಾರಕಿಹೊಳಿ | ಲೋಕೋಪಯೋಗಿ |
| ಕೃಷ್ಣ ಭೈರೇಗೌಡ | ಬೆಂಗಳೂರು ಅಭಿವೃದ್ಧಿ |
| ಪ್ರಿಯಾಂಕ್ ಖರ್ಗೆ | ಗೃಹ (ಗುಪ್ತಚರ ಹೊರತುಪಡಿಸಿ) ಮತ್ತು ಐಟಿಬಿಟಿ |
| ಯು.ಟಿ. ಖಾದರ್ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ |
| ಈಶ್ವರ್ ಖಂಡ್ರೆ | ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ |
| ಯತೀಂದ್ರ ಸಿದ್ದರಾಮಯ್ಯ | ನಗರಾಭಿವೃದ್ಧಿ ಮತ್ತು ನಗರ ಯೋಜನೆ (ಬೆಂಗಳೂರು ಬಿಟ್ಟು) |
| ಭೈರತಿ ಸುರೇಶ್ | ಸಾರಿಗೆ |
| ಶರಣಪ್ರಕಾಶ ಪಾಟೀಲ | ವೈದ್ಯಕೀಯ ಶಿಕ್ಷಣ |

# ಸೈಬರ್ ಕ್ರೈಂ ಪ್ರಕರಣದಲ್ಲಿ ಬೆಂಗಳೂರು ದೇಶದಲ್ಲೇ ಮೊದಲ ಸ್ಥಾನ ಬೆಂಗಳೂರು




ಸೈಬರ್ ಅಪರಾಧ ಪ್ರಕರಣಗಳಲ್ಲಿ ರಾಜಧಾನಿ ಬೆಂಗಳೂರು ನಗರವು ದೇಶದಲ್ಲೇ ಮೊದಲ ಸ್ಥಾನ ಪಡೆದಿದೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಹೇಳಿದೆ. ದೇಶದ ವಿವಿಧ ರಾಜ್ಯಗಳಲ್ಲಿ 2024ರಲ್ಲಿ ದಾಖಲಾದ ಅಪರಾಧ ಪ್ರಕರಣಗಳ ಸಂಬಂಧ ಎನ್‌ಸಿಆರ್‌ಬಿ ಬಿಡುಗಡೆ ಮಾಡಿರುವ ವರದಿಯಲ್ಲಿ ಈ ಮಾಹಿತಿ ಬಹಿರಂಗವಾಗಿದೆ.

## ಯಾವ್ಯಾವ ನಗರದಲ್ಲಿ ಎಷ್ಟು ಸೈಬರ್ ಕ್ರೈಂ ಕೇಸ್‌ವರದಿ

ಈ ವರದಿಯ ಪ್ರಕಾರ, 2024ರಲ್ಲಿ ದೇಶದಲ್ಲಿ ಒಟ್ಟಾರೆ 34,958 ಅಪರಾಧ ಪ್ರಕರಣಗಳು ದಾಖಲಾಗಿವೆ. ಈ ಪೈಕಿ ಬೆಂಗಳೂರು ನಗರ ಒಂದರಲ್ಲೇ 17,561 ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನ ಬಳಿಕ 4,939 ಪ್ರಕರಣಗಳೊಂದಿಗೆ ಮುಂಬಯಿ ಎರಡನೇ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ಹೈದರಾಬಾದ್ (4,009), ಚೆನ್ನೈ (1,882), ಪುಣೆ (1,504) ಮತ್ತು ಲಖನೌ (1,292) ನಗರಗಳಿವೆ. ಇನ್ನು, ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ (404).

ಕರ್ನಾಟಕ ರಾಜ್ಯದಲ್ಲಿ 2024ರಲ್ಲಿ ಒಟ್ಟಾರೆ 21,993 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿವೆ. ಅದೇ ರೀತಿ 2023ರಲ್ಲಿ 21,889 ಸೈಬರ್ ಪ್ರಕರಣಗಳು ದಾಖಲಾಗಿದ್ದವು. ಈ ಅಂಕಿ–ಸಂಖ್ಯೆಗಳನ್ನು ಅವಲೋಕಿಸಿದರೆ ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಸೈಬರ್ ಅಪರಾಧಗಳು ಏರಿಕೆಯಾಗುತ್ತಿರುವುದು ದೃಢಪಟ್ಟಿದೆ.

## ರಾಜ್ಯದ ಮುಕ್ಕಾಲು ಭಾಗ ಸೈಬರ್‌ಕ್ರೈಂ ಬೆಂಗಳೂರಿನಲ್ಲೇ

2023ರಲ್ಲಿ ಬೆಂಗಳೂರಿನಲ್ಲಿ 17,631 ಸೈಬರ್ ಪ್ರಕರಣಗಳು ದಾಖಲಾಗಿದ್ದವು. ಅದೇ ರೀತಿ 2024ರಲ್ಲಿ 17,561 ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 3,632 ಪ್ರಕರಣಗಳು ಇತ್ಯರ್ಥವಾಗಿವೆ. ಇನ್ನೂ 13,929 ಪ್ರಕರಣಗಳು ಬಾಕಿ ಉಳಿದಿವೆ. ಕರ್ನಾಟಕದಲ್ಲಿ 2024ರಲ್ಲಿ 5,096 ಸೈಬರ್ ಅಪರಾಧಿಗಳು ಶಿಕ್ಷೆಗೆ ಗುರಿಯಾಗಿದ್ದಾರೆ. ಇಡೀ ರಾಜ್ಯದ ಮುಕ್ಕಾಲು ಪ್ರಮಾಣದಷ್ಟು ಸೈಬರ್ ಪ್ರಕರಣಗಳು ಬೆಂಗಳೂರು ನಗರ ಒಂದರಲ್ಲೇ ದಾಖಲಾಗುತ್ತಿವೆ ಎಂದು ಎನ್‌ಸಿಆರ್‌ಬಿ ವರದಿ ಹೇಳಿದೆ.

## ಜಾಗೃತಿ ಫಲವಾಗಿ ದೂರಿನ ಸಂಖ್ಯೆ ಹೆಚ್ಚಳ

"ಬೆಂಗಳೂರು ಸೇರಿದಂತೆ ರಾಜ್ಯದೆಲ್ಲೆಡೆ ಪೊಲೀಸರ ಪ್ರಯತ್ನದ ಫಲವಾಗಿ ಸೈಬರ್ ಅಪರಾಧಗಳ ಬಗ್ಗೆ ಜನರಲ್ಲಿ ಜಾಗೃತಿ ಹೆಚ್ಚುತ್ತಿದೆ. ಹೀಗಾಗಿ, ಪ್ರಕರಣಗಳ ದಾಖಲಾತಿ ಹೆಚ್ಚುತ್ತಿದೆ," ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಸಮರ್ಥಿಸಿಕೊಂಡಿದ್ದಾರೆ. "ಬೆಂಗಳೂರು ನಗರದಲ್ಲಿ 11 ವಿಶೇಷ ಸೈಬರ್ ಪೊಲೀಸ್ ಠಾಣೆಗಳಿರುವುದು ಪ್ರಕರಣಗಳ ದಾಖಲಾತಿ ಹೆಚ್ಚಳಕ್ಕೆ ಪ್ರಮುಖ ಕಾರಣ. ಜತೆಗೆ, ಆನ್‌ಲೈನ್ ಮೂಲಕವೂ ದೂರು ನೀಡುವ ವ್ಯವಸ್ಥೆಯಿದೆ. ಹೀಗಾಗಿ, ಜನರು ಯಾವುದೇ ಸಮಸ್ಯೆಯಿಲ್ಲದೆ ಸುಲಭವಾಗಿ ದೂರು ದಾಖಲಿಸುತ್ತಿದ್ದಾರೆ," ಎಂದು ಅಧಿಕಾರಿಗಳು ಹೇಳಿದ್ದಾರೆ.

# ಶ್ರೀ ವೀರಪುಲಿಕೇಶಿ ಕೋ-ಆಪರೇಟಿವ್ ಬ್ಯಾಂಕ್ ಲಿ., ಬಾದಾಮಿ

ಪ್ರಧಾನ ಕಛೇರಿ : ಬಾದಾಮಿ, ಬಾಗಲಕೋಟೆ ಜಿಲ್ಲೆ, ಕರ್ನಾಟಕ

**ಸಹಕಾರ ಕ್ಷೇತ್ರದ ಇತಿಹಾಸದಲ್ಲಿ 50 ವರ್ಷಗಳನ್ನು ಪೂರೈಸಿ ಸುವರ್ಣ ಮಹೋತ್ಸವ ಆಚರಿಸಿರುವ ನಿಮ್ಮ ನೆಚ್ಚಿನ ಬ್ಯಾಂಕ್**




ಬ್ಯಾಂಕಿನ ಆಡಳಿತ ಕಛೇರಿಯ ನಿಯೋಜಿತ ಕಟ್ಟಡ


| ಯಶೋಗಾಥೆ | ಒಟ್ಟು ಸದಸ್ಯರು | ಶೇರು ಬಂಡವಾಳ | ಠೇವುಗಳು | ಮುಂಗಡ ನೀಡಿಕೆ | ದುಡಿಯುವ ಬಂಡವಾಳ | ಲಾಭ (ರೂ. ಲಕ್ಷಗಳಲ್ಲಿ) |
|---|---|---|---|---|---|---|
| ರಜತ ಮಹೋತ್ಸವ 1990-91 | 14550 | 29.30 | 583.79 | 532.29 | 683.78 | 8.00 |
| ಸುವರ್ಣ ಮಹೋತ್ಸವ 2015-16 | 21684 | 849.45 | 31540.72 | 17207.42 | 35493.57 | 100.39 |
| ಪ್ರಸಕ್ತ ಸಾಲಿನ ವರ್ಷ 2025-26 | 18448 | 1245.40 | 45519.61 | 26365.85 | 55378.13 | 200.66 |
| ಸನ್ 2025-26ನೇ ಸಾಲಿನಲ್ಲಿ ಶೇರುದಾರರಿಗೆ ಶೇಕಡಾ 8% ಡಿವಿಡೆಂಟ್ ವಿತರಿಸಲಾಗಿದೆ. | | | | | | |

| ಠೇವುಗಳ ಮೇಲಿನ ಬಡ್ಡಿ ದರಗಳು | | |
|---|---|---|
| **31 ದಿವಸಗಳಿಂದ 90 ದಿವಸಗಳವರೆಗೆ** | **4.50%** | **ಹಿರಿಯ ನಾಗರೀಕರಿಗೆ 5.00%** |
| 91 ದಿವಸಗಳಿಂದ ರಿಂದ 180 ದಿವಸಗಳವರೆಗೆ | 5.50% | 6.00% |
| 181 ದಿವಸಗಳಿಂದ 1 ವರ್ಷದ ಒಳಗೆ | 6.50% | 7.00% |
| 1 ವರ್ಷ ಮೇಲ್ಪಟ್ಟು 3 ವರ್ಷಗಳ ಒಳಗೆ | 7.50% | 8.00% |
| 3 ವರ್ಷ ಹಾಗೂ ಮೇಲ್ಪಟ್ಟು | 8.50% | 9.00% |
| ರೂ. 25 ಲಕ್ಷ ಮತ್ತು ಮೇಲ್ಪಟ್ಟು ಮೊತ್ತದ ಒಂದೇ ರಶೀದಿ ಠೇವಿಗೆ (1 ವರ್ಷದ ಅವಧಿಗೆ ಮಾತ್ರ) | 9.50% | |

| ವಿವರಗಳು | ಬಡ್ಡಿದರ ವರ್ಷಕ್ಕೆ ಪ್ರತಿಶತ ರೂ. |
|---|---|
| ಮನೆ ಕಟ್ಟಡ ಹಾಗೂ ಮನೆ ಖರೀದಿ ಸಾಲಗಳಿಗೆ | 9.25 |
| ಚಿನ್ನಾಭರಣ ಆಧಾರಿತ ಸಾಲಗಳು | 10.00 |
| ಮಾಲು ಆಧಾರಿತ, ಗುಡಿ ಕೈಗಾರಿಕೆ ಮತ್ತು ಸರಕಾರಿ ಭದ್ರತಾ ಪತ್ರಗಳ ಆಧಾರಿತ ಸಾಲಗಳು | 11.00 |
| ಹೊಸ ವಾಹನ ಖರೀದಿ, ಹೊಸ ಮಶಿನರಿ ಖರೀದಿ, ಇಂಡಸ್ಟ್ರೀಸ್ ಸಾಲಗಳು | 12.50 |
| 75 ಲಕ್ಷದ ವರೆಗಿನ ಭದ್ರತಾ ಸಾಲಗಳು | 14.00 |
| 75 ಲಕ್ಷ ಮೇಲ್ಪಟ್ಟು ಮೊತ್ತದ ಭದ್ರತಾ ಸಾಲಗಳು | 15.00 |
| ಅಭದ್ರತಾ ಸಾಲಗಳು (ಜಾಮೀನು ಆಧಾರಿತ ಸಾಲಗಳು) | 16.00 |
| ಮೇಲಿನ ಸಾಲಗಳನ್ನು ಹೊರತುಪಡಿಸಿ ಉಳಿದ ಸಾಲಗಳಿಗೆ | 15.00 |
| ಪೆಟ್ರೋಲ್ ಬಂಕ್ ವ್ಯವಹಾರ/ದುಡಿಯುವ ಬಂಡವಾಳ ಉದ್ದೇಶಕ್ಕಾಗಿ ನೀಡುವ ಸಾಲಗಳಿಗೆ | 9.50 |


ಮಾನ್ಯಶ್ರೀ ಎಂ.ಕೆ. ಪಟ್ಟಣಶೆಟ್ಟಿ
ಮಾಜಿ ಶಾಸಕರು, ಅಧ್ಯಕ್ಷರು

ಬ್ಯಾಂಕಿನ ಆಡಳಿತ ಮಂಡಳಿ : ಶ್ರೀ ಎಂ.ಕೆ. ಪಟ್ಟಣಶೆಟ್ಟಿ, ಅಧ್ಯಕ್ಷರು, ಡಾ. ಡಿ.ಎಂ. ಪೈಲ, ಉಪಾಧ್ಯಕ್ಷರು

ನಿರ್ದೇಶಕರು : ಶ್ರೀ ಎ.ಸಿ. ಪಟ್ಟಣದ, ಶ್ರೀ ಆಯ್.ಕೆ. ಪಟ್ಟಣಶೆಟ್ಟಿ, ಶ್ರೀ ಜಿ.ಎಚ್. ಘಟ್ಟದ, ಶ್ರೀ ವಿ.ಕೆ. ಬಾಗಲೆ, ಶ್ರೀ ಬಿ.ಎಂ. ಟೆಂಗಿನಕಾಯಿ, ಶ್ರೀ ಕೆ.ಎಂ. ಪಟ್ಟಣಶೆಟ್ಟಿ, ಶ್ರೀ ಎಂ.ಎಸ್. ಹಿರೇಹಾಳ, ಶ್ರೀ ಸಿ.ಯು. ಪಟ್ಟಣದ, ಶ್ರೀ ಎಂ.ಎಸ್. ತೆಗ್ಗಿನಮನಿ, ಶ್ರೀ ವಿ.ಆರ್. ಪಾಟೀಲ, ಶ್ರೀ ಎಚ್.ಕೆ. ಬೆಳ್ಳಿಗುಂಡಿ,ಶ್ರೀ ಎಂ.ಆರ್. ತಳವಾರ, ಶ್ರೀಮತಿ ಕೆ.ಬಿ. ಬಂಗಾರಶೆಟ್ಟರ, ಶ್ರೀಮತಿ ಎಸ್.ಎಂ. ಪಟ್ಟಣಶೆಟ್ಟಿ. ಶ್ರೀ ಜೆ.ಬಿ. ಬೂದಿಹಾಳ, ವೃತ್ತಿಪರ ನಿರ್ದೇಶಕರು, ಶ್ರೀ ಎಂ.ಎನ್. ತಪಶೆಟ್ಟಿ, ವೃತ್ತಿಪರ ನಿರ್ದೇಶಕರು, ಶ್ರೀಮತಿ ಎಂ.ಬಿ. ದೇಶಣ್ಣವರ, ಪ್ರಧಾನ ವ್ಯವಸ್ಥಾಪಕರು

# ರೂಪಾಯಿಯ ಸಾರ್ವಕಾಲಿಕ ಕುಸಿತ ನೇರವಾಗಿ ಎಲ್ಲರ ಜೇಬೂ ಸುಡಲಿದೆ



ಗಿರೀಶ್ ಲಿಂಗಣ್ಣ
ಲೇಖಕರು,
ಬಾಹ್ಯಾಕಾಶ ಮತ್ತು ರಕ್ಷಣಾ ವಿಶ್ಲೇಷಕ



ಅಮೆರಿಕನ್ ಡಾಲರ್ ಎದುರು ಭಾರತೀಯ 'ರೂಪಾಯಿ ತನ್ನ ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಹಾಗೆಂದು ಇದು ನಮ್ಮಂತಹ ಜನಸಾಮಾನ್ಯರ ದೈನಂದಿನ ಜೀವನಕ್ಕೆ ದೂರಾದ, ಉದ್ಯಮಗಳಿಗೆ ಸಂಬಂಧಿಸಿದ ಸುದ್ದಿ ಮಾತ್ರವಲ್ಲ! ರೂಪಾಯಿ ಮೌಲ್ಯ ಕುಸಿತದ ಪರಿಣಾಮ ನೇರವಾಗಿಯೇ ನಮ್ಮ ಜೇಬು, ನಮ್ಮ ಅಡುಗೆಮನೆ. ನಮ್ಮ ಪ್ರಯಾಣ ಯೋಜನೆಗಳು. ತಿಂಗಳ ಖರ್ಚು ವೆಚ್ಚಗಳು, ಹೀಗೆ ಪ್ರತಿಯೊಂದರ ಮೇಲೂ ಬೀರಲಿದೆ. ಯಾವಾಗ ರೂಪಾಯಿ ಮೌಲ್ಯ ಕುಸಿತ ಕಾಣುತ್ತದೋ, ಆಗ ಅದರ ಪರಿಣಾಮಗಳು ನಿಧಾನವಾಗಿ ಇಂಧನ ದರಗಳು, ಆಹಾರ ಉತ್ಪನ್ನಗಳು, ಆಮದು ಪದಾರ್ಥಗಳು ಮತ್ತು ಬಹುತೇಕ ಎಲ್ಲ ದೈನಂದಿನ ಖರ್ಚುಗಳ ಮೇಲೆ ಕಾಣಿಸಿಕೊಳ್ಳಲಿವೆ. ನಿಜಕ್ಕೂ ಈಗ ನಡೆಯುತ್ತಿರುವುದೇನು ಎನ್ನುವುದನ್ನು ಸರಳವಾಗಿ ಈ ಲೇಖನದಲ್ಲಿ ತಿಳಿಯೋಣ.

ಸದ್ಯದ ಮಟ್ಟಿಗೆ ರೂಪಾಯಿ ಡಾಲರ್ ಎದುರು ಭಾರೀ ಕುಸಿತ ಕಂಡು, ಪ್ರತಿ ಡಾಲರ್‌ಗೆ ಬಹುತೇಕ 96 ರೂಪಾಯಿ ಮೌಲ್ಯ ಹೊಂದಿದೆ. ಇದು ಇತಿಹಾಸದಲ್ಲೇ ರೂಪಾಯಿಯ ಅತ್ಯಂತ ಕನಿಷ್ಠ ಮೌಲ್ಯ. ಅಂದರೆ, ಈಗ ಭಾರತಕ್ಕೆ ಅದೇ ಒಂದು ಡಾಲರ್ ಖರೀದಿಸಲು ಹೆಚ್ಚಿನ ರೂಪಾಯಿ ಬೇಕಾಗುತ್ತದೆ. ಮೊದಲೆಲ್ಲ ಯಾವುದಾದರೂ ವಸ್ತುವಿನ ಬೆಲೆ ಒಂದು ಡಾಲರ್ ಆಗಿದ್ದರೆ, ಅದನ್ನು ಖರೀದಿಸಲು ಕೊಂಚ ಕಡಿಮೆ ಹಣ ನೀಡಬೇಕಿತ್ತು. ಆದರೆ ಈಗ, ಅದೇ ವಸ್ತುವಿಗೆ 96 ರೂಪಾಯಿ ನೀಡಬೇಕು. ಇದು ಬಹಳ ಸಣ್ಣ ಮೊತ್ತದಂತೆ ಕಾಣಬಹುದು. ಆದರೆ, ಭಾರತ ವಿದೇಶಗಳಿಂದ ವಸ್ತುಗಳನ್ನು ಖರೀದಿಸುವಾಗ ಇದು ಬಹುದೊಡ್ಡ ಮೊತ್ತವೇ ಆಗಿಬಿಡುತ್ತದೆ. ಭಾರತ ವಿದೇಶಗಳಿಂದ ಅಪಾರ ಪ್ರಮಾಣದ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿದ್ದು, ಅದರಲ್ಲಿ ಕಚ್ಚಾ ತೈಲ ಅತ್ಯಧಿಕ ಪಾಲು ಹೊಂದಿದೆ. ಭಾರತ ತನ್ನ ಅವಶ್ಯಕತೆಯ ಶೇ.90 ತೈಲವನ್ನು ಆಮದಿನ ಮೂಲಕವೇ ಪಡೆಯುತ್ತಿದ್ದು, ಇದಕ್ಕೆ ಅಮೆರಿಕನ್ ಡಾಲರ್‌ನಲ್ಲೇ ಪಾವತಿ ಮಾಡುತ್ತದೆ. ಯಾವಾಗ ಒಂದೇ ಸಮಯಕ್ಕೆ ಜಾಗತಿಕ ತೈಲ ಬೆಲೆ ಏರಿ, ರೂಪಾಯಿ ಮೌಲ್ಯ ಕುಸಿತ ಕಾಣುತ್ತದೋ, ಆಗ ಭಾರತ ಎರಡೆರಡು ಏಟು ತಿನ್ನುವಂತಾಗುತ್ತದೆ. ಮೊದಲ ಏಟು, ನಾವು ಅದೇ ಪ್ರಮಾಣದ ತೈಲ ಖರೀದಿಗೆ ಹೆಚ್ಚಿನ ಡಾಲರ್ ಪಾವತಿಸಬೇಕು. ಎರಡನೆಯದಾಗಿ, ಪ್ರತಿಯೊಂದು ಡಾಲರ್‌ಗೂ ಈಗ ಹೆಚ್ಚುವರಿ ರೂಪಾಯಿ ತೆರಬೇಕು. ಇದರ ಪರಿಣಾಮವಾಗಿ ಭಾರತದ ಆಮದು ವೆಚ್ಚದಲ್ಲಿ ಅಪಾರ ಏರಿಕೆಯಾಗಿ, ನಿಧಾನವಾಗಿ ಪೆಟ್ರೋಲ್, ಡೀಸೆಲ್, ಸಾಗಾಣಿಕಾ ವೆಚ್ಚ ಮತ್ತು ದೈನಂದಿನ ಬಳಕೆಯ ವಸ್ತುಗಳ ಬೆಲೆಯೂ ಹೆಚ್ಚಾಗುತ್ತದೆ. ಅಷ್ಟೇ ಏಕೆ. ನಮ್ಮ ಸ್ಥಳೀಯ ಮಾರುಕಟ್ಟೆಗಳಿಗೆ ಟ್ರಕ್ ಮೂಲಕ ಬರುವ ತರಕಾರಿಗಳೂ ದುಬಾರಿಯಾಗಲಿವೆ.

**ಇದೆಲ್ಲದೂ ಯಾಕಾಗುತ್ತಿದೆ? :** ಇದಕ್ಕೆ ಮುಖ್ಯವಾಗಿ ಮೂರು ಕಾರಣಗಳಿವೆ. ಮೊದಲನೆಯ ಮತ್ತು ಅತ್ಯಂತ ದೊಡ್ಡ ಕಾರಣವೆಂದರೆ ಇರಾನ್ ಯುದ್ಧ ಹೊರ್ಮುಸ್ ಜಲಸಂಧಿಯ ಸುತ್ತಲಿನ ಉದ್ವಿಗ್ನತೆ ಜಾಗತಿಕ ತೈಲ ಮತ್ತು ಅನಿಲ ಪೂರೈಕೆಯನ್ನು ಅಸ್ತವ್ಯಸ್ತಗೊಳಿಸಿದೆ. ಬಹಳಷ್ಟು ತೈಲ ಸಾಗಾಣಿಕಾ ಹಡಗುಗಳು

ಈಗ ಅಮೆರಿಕ ಮತ್ತು ಇರಾನ್ ನಡುವಿನ ಕದನದ ಕಾರಣದಿಂದ ಮುಕ್ತವಾಗಿ ಚಲಿಸದಂತಾಗಿವೆ. ಇದು ಆ ಪ್ರದೇಶದಲ್ಲಿ ಸಮುದ್ರದಲ್ಲೇ ತೈಲ ಟ್ಯಾಂಕರ್‌ಗಳ ಟ್ರಾಫಿಕ್ ಜಾಮ್ ಉಂಟುಮಾಡಿದೆ. ಪರಿಣಾಮವಾಗಿ ಜಾಗತಿಕ ತೈಲ ದರಗಳು ಪ್ರತಿ ಬ್ಯಾರಲ್‌ಗೆ 100 ಡಾಲರ್ ದಾಟಿವೆ. ಭಾರತದಂತಹ ಅತ್ಯಧಿಕ ತೈಲ ಬಳಕೆದಾರ ರಾಷ್ಟ್ರಕ್ಕೆ ಇದು ಕಾರ್ಖಾನೆಗಳಿಂದ ಅಡುಗೆ ಅನಿಲದ ಸಿಲಿಂಡರ್ ತನಕ ಎಲ್ಲ ಇಂಧನಕ್ಕೂ ಆಘಾತ ನೀಡಿದೆ.

ಇನ್ನು ಎರಡನೇ ಕಾರಣವೆಂದರೆ, ವಿದೇಶೀ ಹೂಡಿಕೆದಾರರು ಭಾರತದಿಂದ ತಮ್ಮ ಹಣವನ್ನು ಹಿಂಪಡೆಯುತ್ತಿದ್ದಾರೆ. ದೊಡ್ಡ ಜಾಗತಿಕ ಹೂಡಿಕೆದಾರರು ತಮ್ಮ ಭಾರತೀಯ ಷೇರುಗಳು ಮತ್ತು ಬಾಂಡ್ ಗಳನ್ನು ಮಾರಾಟ ಮಾಡಿ, ತಮ್ಮ ರೂಪಾಯಿಯನ್ನು ಮರಳಿ ಡಾಲರ್‌ಗೆ ಪರಿವರ್ತಿಸುತ್ತಿದ್ದಾರೆ. ಕೇವಲ ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲೇ 20 ಬಿಲಿಯನ್ ಡಾಲರ್‌ಗೂ ಹೆಚ್ಚು ಮೊತ್ತವನ್ನು ಮಾರುಕಟ್ಟೆಯಿಂದ ಹಿಂಪಡೆಯಲಾಗಿದೆ.

ಯಾವಾಗ ಹೀಗೆ ದೊಡ್ಡ ಹೂಡಿಕೆದಾರರಿಗೂ ಡಾಲರ್ ಬೇಕಾಗುತ್ತದೋ, ಆಗ ಡಾಲರ್‌ಗೆ ಬೇಡಿಕೆ ಹೆಚ್ಚಿ, ರೂಪಾಯಿ ದುರ್ಬಲಗೊಳ್ಳುತ್ತದೆ. ಇನ್ನು ಮೂರನೇ ಕಾರಣವೆಂದರೆ, ಅಮೆರಿಕನ್ ಡಾಲರ್ ಜಾಗತಿಕವಾಗಿ ಹೆಚ್ಚು ಶಕ್ತಿಶಾಲಿಯಾಗುತ್ತಿದೆ. ಯಾವಾಗ ಜಗತ್ತು ಉದ್ವಿಗ್ನ ಅಥವಾ ಅನಿಶ್ಚಿತವಾಗುತ್ತದೋ, ಆಗ ಹೂಡಿಕೆದಾರರು ಡಾಲರ್‌ನಂತಹ ಸುರಕ್ಷಿತ ಆಯ್ಕೆಯತ್ತ ಮುಖ ಮಾಡುತ್ತಾರೆ. ಇದನ್ನು ಜನರು ಬಿಕ್ಕಟ್ಟಿನ ಸಮಯದಲ್ಲಿ ಚಿನ್ನ ಖರೀದಿಸಲು ಧಾವಿಸುವುದಕ್ಕೆ ಹೋಲಿಸಬಹುದು. ಆದ್ದರಿಂದ ಹಣ ಭಾರತದಂತಹ ಅನಿಶ್ಚಿತ ಮಾರುಕಟ್ಟೆಯಿಂದ ಡಾಲರ್ ಆಸ್ತಿಯತ್ತ ಸಾಗುತ್ತದೆ. ಇದು ತಾನಾಗಿಯೇ ರೂಪಾಯಿಯನ್ನು ದುರ್ಬಲಗೊಳಿಸುತ್ತದೆ.

ಈ ಮೂರೂ ಕಾರಣಗಳನ್ನು, ಅಂದರೆ ತೈಲದರ ಹೆಚ್ಚಳ, ವಿದೇಶಿ ಹೂಡಿಕೆ ದೇಶದಿಂದ ಹೊರನಡೆಯುವುದು ಮತ್ತು ಡಾಲರ್ ಬಲಗೊಳ್ಳುವುದನ್ನು ಒಟ್ಟಾಗಿಸಿದರೆ, ಭಾರತೀಯ ರೂಪಾಯಿ ಮೇಲಿನ ಒತ್ತಡ ಅತ್ಯಂತ ಹೆಚ್ಚಾಗುತ್ತದೆ. ಇದರಿಂದ ಸಾಮಾನ್ಯ ಜನರಿಗೆ ಮತ್ತು ಕುಟುಂಬಗಳಿಗೆ ಉಂಟಾಗುವ ಪರಿಣಾಮವೇನು? ರೂಪಾಯಿ ದುರ್ಬಲಗೊಳ್ಳುವುದು ಕೇವಲ ಒಂದು ಸುದ್ದಿ ಮಾತ್ರವಲ್ಲ, ಕಾಲ ಕಳೆದಂತೆ, ಅಧಿಕ ಇಂಧನ ಬೆಲೆಯ ಕಾರಣದಿಂದ ನಮ್ಮ ದೈನಂದಿನ ಪ್ರಯಾಣ ದುಬಾರಿಯಾಗುತ್ತದೆ.

ವಿದೇಶೀ ಪ್ರವಾಸ, ವಿದೇಶೀ ಶಿಕ್ಷಣ ಮತ್ತು ವಿದೇಶಗಳಿಂದ ಆನ್‌ಲೈನ್ ಖರೀದಿಯೂ ಸಹ ದುಬಾರಿಯಾಗುತ್ತದೆ. ಬಹಳಷ್ಟು ಮೊಬೈಲ್ ಫೋನ್‌ಗಳು, ಲ್ಯಾಪ್ ಟಾಪ್‌ಗಳು, ಮತ್ತು ಇಲೆಕ್ಟ್ರಾನಿಕ್ಸ್ ಬಿಡಿಭಾಗಗಳು ವಿದೇಶಗಳಿಂದ ಆಮದಾಗುವುದರಿಂದ, ಅವು ದುಬಾರಿಯಾಗಲಿವೆ. ಖಾದ್ಯ ತೈಲ, ಒಂದಷ್ಟು ಆಹಾರ ಉತ್ಪನ್ನಗಳು ಮತ್ತು ಆಮದು ಔಷಧಗಳ ಬೆಲೆಯೂ ಹೆಚ್ಚಾಗಬಹುದು.



ಒಟ್ಟಾರೆಯಾಗಿ, ರೂಪಾಯಿ ಮೌಲ್ಯ ಕುಸಿದಾಗ ಭಾರತ ಜಗತ್ತಿಗೆ ಹೆಚ್ಚಿನ ಹಣ ಪಾವತಿಸುತ್ತದೆ. ಇದರಿಂದ ನಿಧಾನವಾಗಿ ನಮ್ಮ ತಿಂಗಳ ವೆಚ್ಚಕ್ಕೂ ಬಿಸಿ ಮುಟ್ಟುತ್ತದೆ. ಭಾರತೀಯ ರಿಸರ್ವ್ ಬ್ಯಾಂಕ್ ಹಾನಿಯನ್ನು ತಡೆಗಟ್ಟಲು ಸಕ್ರಿಯವಾಗಿ ಶ್ರಮಿಸುತ್ತಿದೆ. ಅದು ಭಾರತದ ವಿದೇಶಿ ವಿನಿಮಯ ಸಂಗ್ರಹದಿಂದ ಡಾಲರ್‌ಗಳನ್ನು ಮಾರಾಟ ಮಾಡಿ, ಭಾರತೀಯ ರೂಪಾಯಿಗೆ ಬೆಂಬಲ ಒದಗಿಸಿ, ಮಾರುಕಟ್ಟೆಯಲ್ಲಿ ಇದ್ದಕ್ಕಿದ್ದಂತೆ ಉದ್ವಿಗ್ನ ಪರಿಸ್ಥಿತಿ ಉಂಟಾಗದಂತೆ ತಡೆಯುತ್ತಿದೆ. ಇದು ಒಂದು ರೀತಿ ಹಾನಿ ನಿಯಂತ್ರಣ ಕ್ರಮದಂತಿದ್ದು, ಪತನವನ್ನು ಸಂಪೂರ್ಣವಾಗಿ ತಡೆಗಟ್ಟದಿದ್ದರೂ ನಿಧಾನಗೊಳಿಸುತ್ತದೆ.

ನರೇಂದ್ರ ಮೋದಿ ಸರ್ಕಾರವೂ ಮಧ್ಯ ಪ್ರವೇಶಿಸಿ ಚಿನ್ನ ಮತ್ತು ಬೆಳ್ಳಿಯ ಮೇಲಿನ ಆಮದು ಸುಂಕವನ್ನು ಹೆಚ್ಚಿಸಿದೆ. ಏಕೆಂದರೆ, ಚಿನ್ನದ ಖರೀದಿ ದೇಶದಿಂದ ದೊಡ್ಡ ಪ್ರಮಾಣದಲ್ಲಿ ಡಾಲರ್ ಸಂಗ್ರಹವನ್ನು ಖಾಲಿ ಮಾಡುತ್ತದೆ. ಸರ್ಕಾರದ ಗುರಿ ಅನವಶ್ಯಕ ಆಮದು ಕಡಿತಗೊಳಿಸಿ, ಡಾಲರ್ ಉಳಿತಾಯ ಮಾಡುವುದಾಗಿದೆ. ಆದರೆ, ಈ ಕ್ರಮಗಳು ಕೇವಲ ತಾತ್ಕಾಲಿಕ ಪರಿಹಾರಗಳಷ್ಟೇ. ಒಂದು ವೇಳೆ ತೈಲ ದರಗಳು ಹೆಚ್ಚಾಗಿಯೇ ಇದ್ದು, ವಿದೇಶೀ ಹೂಡಿಕೆದಾರರು ಭಾರತದಿಂದ ಹಣವನ್ನು ಹೊರಪಡೆದರೆ, ಆಗ ರೂಪಾಯಿ ಒತ್ತಡದಲ್ಲೇ ಇರಲಿದೆ. ಆದರೆ, ಇದೊಂದು ತೀರಾ ತುರ್ತು ಪರಿಸ್ಥಿತಿ ಅಲ್ಲದಿರುವುದೇ ನಮಗೆ ಒಳ್ಳೆಯ ಸುದ್ದಿ, ಭಾರತದ ಆರ್ಥಿಕ ವ್ಯವಸ್ಥೆ ಇನ್ನೂ ಸ್ಥಿರವಾಗಿಯೇ ಇದ್ದು, ಆರ್‌ಬಿಐ ಗಂಭೀರವಾಗಿ ಕಾರ್ಯಾಚರಿಸುತ್ತಿದೆ. ಆದರೆ, ನಾವು ಪಾಲಿಸುವ ಒಂದಷ್ಟು ಹಣಕಾಸಿನ ಶಿಸ್ತು ಮತ್ತು ವೆಚ್ಚದಲ್ಲಿನ ಜಾಗರೂಕತೆಯೂ ನೆರವಾಗಲಿದ್ದು, ಇಂತಹ ಸಂಕೀರ್ಣ ಸಮಯದಲ್ಲಿ ದೇಶಕ್ಕೆ ಅನುಕೂಲ ಕಲ್ಪಿಸಲಿದೆ.

# THE UDUPI CO-OP. TOWN BANK LTD.
# ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕ್ ಲಿ.

(ಭಾರತೀಯ ರಿಸರ್ವ್ ಬ್ಯಾಂಕಿನ ನಿಯಂತ್ರಣಕ್ಕೆ ಒಳಪಟ್ಟಿದೆ : License No. UBD.KA.1043P)
ಬಾಳಿಗಾ ಆರ್ಕೇಡ್, ವಿದ್ಯಾಸಮುದ್ರ ಮಾರ್ಗ, ಉಡುಪಿ-576101
Ph : 0820-2523506, 8861186799, e-mail : town.bank@gmail.com, website:www.udupicooptownbank.com




- RTGS & NEFT ಸೌಲಭ್ಯ
- UPI ಆಧಾರಿತ ಪಾವತಿ ವ್ಯವಸ್ಥೆ
- Swiping Machine ಲಭ್ಯತೆ
- E-Stamping ಸೌಲಭ್ಯ
- ಇ-ಪೇಮೆಂಟ್ ಆಫ್ ಟ್ಯಾಕ್ಸ್ & GST
- ಭಾರತೀಯ ರಿಸರ್ವ್ ಬ್ಯಾಂಕಿನ DICGC ವತಿಯಿಂದ ಠೇವಣಿಗಳಿಗೆ ವಿಮಾ ಭದ್ರತೆ
- ATM/Cash Recycling & Cash Deposit (CRM) ಸೌಲಭ್ಯ
- ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಭಿಮಾ ಯೋಜನಾ
- ಕಡಿಮೆ ಬಡ್ಡಿ ದರದಲ್ಲಿ ಸುಲಭ ಕಂತುಗಳಲ್ಲಿ ಸಾಲ ಸೌಲಭ್ಯಗಳು
- ವಿದ್ಯಾರ್ಥಿಗಳಿಗೆ ZERO Balance ನಲ್ಲಿ ಉಳಿತಾಯ ಖಾತೆ & ATM ಸೌಲಭ್ಯ
- DBT ಸೌಲಭ್ಯದ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಾಯಧನ, ಪಿಂಚಣಿ ಅಥವಾ ಯಾವುದೇ ಯೋಜನೆಗಳ ಮೊತ್ತವನ್ನು ಸುಲಭವಾಗಿ ಪಡೆಯಬಹುದಾಗಿದೆ.
- NACH Mandate ಸೌಲಭ್ಯ

## ಠೇವಣಿಗಳಿಗೆ ಅತ್ಯಧಿಕ ಬಡ್ಡಿ




**ಹಿರಿಯ ನಾಗರಿಕರಿಗೆ**

**8.51%** (ವಾರ್ಷಿಕ ವೃದ್ಧಿ ದರ)

**ಸಹಕಾರ ಸಂಘಗಳಿಗೆ**

**8.75%**



**ಚಿನ್ನಾಭರಣ ಈಡಿನ ಸಾಲಗಳಿಗೆ ಗರಿಷ್ಠ ಮಾರುಕಟ್ಟೆ ಮೌಲ್ಯ ಮತ್ತು ಶೀಘ್ರ ಸಾಲ ಮಂಜೂರಾತಿ**

ತಮ್ಮ ಆರ್ಥಿಕ ಅಗತ್ಯತೆಗಳಿಗಾಗಿ ಸಮೀಪದ ಶಾಖೆಗಳನ್ನು ಸಂಪರ್ಕಿಸಿ

| | | | |
|---|---|---|---|
| ಮುಖ್ಯ ಶಾಖೆ | : 8861186800 | ಪೆರ್ಡೂರು | : 8861186805 |
| ದೊಡ್ಡಣಗುಡ್ಡೆ | : 9148418406 | ಕಟಪಾಡಿ | : 8861186806 |
| ಸಾಲಿಗ್ರಾಮ | : 8861186802 | ಹೆಬ್ರಿ | : 9148418405 |
| ನಡ್ಸಾಲ್ | : 8861186803 | ಕುಂಜಾಲು | : 9148418407 |
| ಕಿನ್ನಿಮೂಲ್ಕಿ | : 8861186804 | ಬೆಳ್ಮಣ್ಣು | : 9148418408 |



**ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯ**
ನಿರ್ದೇಶಕರು
ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ -ಮಹಾಮಂಡಳ ನಿ., ಬೆಂಗಳೂರು
ಅಧ್ಯಕ್ಷರು
ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕ್ ಲಿ. ಉಡುಪಿ

ಶ್ರೀ ಪಿ. ರಾಘವೇಂದ್ರ ಭಟ್
ಉಪಾಧ್ಯಕ್ಷರು

ಶ್ರೀ ಪಿ. ವಿಷ್ಣುಮೂರ್ತಿ ಆಚಾರ್ಯ
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ನಿರ್ದೇಶಕರು : ಶ್ರೀ ಪಿ. ಎನ್. ರವೀಂದ್ರ ರಾವ್, ಶ್ರೀಮತಿ ಮನೋರಮಾ ಎಸ್., ಶ್ರೀ ಎನ್. ಪ್ರಹ್ಲಾದ್ ಬಲ್ಲಾಳ್, ಶ್ರೀ ಭಾಸ್ಕರ ರಾವ್ ಕಿದಿಯೂರು, ಶ್ರೀ ಸೂರ್ಯಪ್ರಕಾಶ್ ರಾವ್ ಎನ್., ಶ್ರೀ ಕೆ. ಮುರಳೀಧರ ಭಟ್, ಶ್ರೀ ಸೀತಾರಾಮ ಕೇಕುಡ, ಡಾ॥ ಪಡುಬಿದ್ರಿ ಶ್ರೀಪತಿ ರಾವ್, ಶ್ರೀ ಜಯಪ್ರಕಾಶ ಭಂಡಾರಿ, ಶ್ರೀ ದೇವದಾಸ್, ಶ್ರೀಮತಿ ರೂಪಾ ಮೋಹನ್

ಮುಖ್ಯ ಸಲಹೆಗಾರರು : ಶ್ರೀ ಎಸ್. ಕುಮಾರಸ್ವಾಮಿ ಉಡುಪ




ಮಹಿಳೆಯರು ಕೆಲವು ವಿಶೇಷ ಸವಾಲುಗಳನ್ನು ಎದುರಿಸುತ್ತಾರೆ. ಲಿಂಗ ವೇತನ ಅಂತರದ ಕಾರಣದಿಂದ ಮಹಿಳೆಯರು ಪುರುಷರಿಗಿಂತ ಕಡಿಮೆ ಆದಾಯ ಗಳಿಸುತ್ತಾರೆ. ಆರ್ಥಿಕ ಜ್ಞಾನ  ಕೇವಲ ಒಂದು ಕೌಶಲ್ಯವಲ್ಲ ಅದು ಮಹಿಳೆಯರಿಗೆ ಒಂದು ಸೂಪರ್ ಪವರ್ ಆಗಿದೆ. ಸಮಾಜದಲ್ಲಿ ಲಿಂಗ ತಾರತಮ್ಯ, ಅಸಮಾನತೆಗಳು ಇನ್ನೂ ಮುಂದುವರಿಯುತ್ತಿರುವ ಸಂದರ್ಭದಲ್ಲಿ, ಹಣದ ಬಗ್ಗೆ ಮಹಿಳೆಯರು ಸರಿಯಾದ ಜ್ಞಾನ, ಅರಿವು ಹೊಂದಿದ್ದರೆ ಭದ್ರತೆ, ಸ್ವಾತಂತ್ರ್ಯ ಮತ್ತು ಮುಂದಿನ ಪೀಳಿಗೆಗೆ ಸಂಪತ್ತು ನಿರ್ಮಿಸುವ ಶಕ್ತಿಯನ್ನು ನೀಡುತ್ತದೆ. ಮಹಿಳೆಯರು ಕೆಲವು ವಿಶೇಷ ಸವಾಲುಗಳನ್ನು ಎದುರಿಸುತ್ತಾರೆ. ಲಿಂಗ ವೇತನ ಅಂತರದ ಕಾರಣದಿಂದ ಮಹಿಳೆಯರು ಪುರುಷರಿಗಿಂತ ಕಡಿಮೆ ಆದಾಯ ಗಳಿಸುತ್ತಾರೆ. ಮಕ್ಕಳ ಪಾಲನೆ ಅಥವಾ ಕುಟುಂಬದ ಜವಾಬ್ದಾರಿಗಳಿಗಾಗಿ ಉದ್ಯೋಗ ಕೌಶಲ್ಯದಲ್ಲಿ ವ್ಯತ್ಯಾಸ ಉಂಟಾದರೆ ಅವರ ಆದಾಯ ಗಳಿಸುವ ವರ್ಷಗಳು ಕಡಿಮೆಯಾಗುತ್ತವೆ.

ಜೊತೆಗೆ ಮಹಿಳೆಯರು ಸರಾಸರಿ ಪುರುಷರಿಗಿಂತ 5–7 ವರ್ಷ ಹೆಚ್ಚು ಬದುಕುವ ಸಾಧ್ಯತೆ ಇರುವುದರಿಂದ ನಿವೃತ್ತಿ ಜೀವನಕ್ಕೆ ಹೆಚ್ಚು ಹಣ ಅಗತ್ಯವಾಗುತ್ತದೆ. ಜೀವನದ ಕೊನೆಯ ಹಂತದಲ್ಲಿ ಆರೋಗ್ಯ ವೆಚ್ಚಗಳು ಹೆಚ್ಚಾಗಬಹುದು ಮತ್ತು ಕೆಲವೊಮ್ಮೆ ಜೀವನ ಸಂಗಾತಿಗಿಂತ ಹೆಚ್ಚು ಕಾಲ ಬದುಕುವ ಪರಿಸ್ಥಿತಿ ಉಂಟಾಗಬಹುದು.

ಆದರೆ ಹಲವು ಅಧ್ಯಯನಗಳು ಹೇಳುವಂತೆ, ಅನೇಕ ಮಹಿಳೆಯರು ಹೂಡಿಕೆ ಮಾಡುವಲ್ಲಿ ಆತ್ಮವಿಶ್ವಾಸ ಕೊರತೆಯಿಂದ ಬಳಲುತ್ತಾರೆ, ಹೂಡಿಕೆ ಬೇಗನೆ ಆರಂಭಿಸಬೇಕಿತ್ತು, ಸರಿಯಾಗಿ ಮಾಡಬೇಕಿತ್ತು ಎಂದು ನಂತರ ಪಶ್ಚಾತ್ತಾಪಪಡುತ್ತಾರೆ. ಮಹಿಳೆಯರ ಈ ಆರ್ಥಿಕ ಜ್ಞಾನ ಸಮಸ್ಯೆಯನ್ನು ಹಲವು ಕ್ರಮಗಳ ಮೂಲಕ ಬಗೆಹರಿಸಬಹುದು.

### ಮೂಲಗಳಿಂದ ಆರಂಭಿಸಿ:

ಮೊದಲು ನಿಮ್ಮ ಹಣಕಾಸಿನ ಸ್ಥಿತಿಯನ್ನು ತಿಳಿದುಕೊಳ್ಳಿ. ನಿಮ್ಮ ಬಳಿ ಎಷ್ಟು ಹಣ ಬರುತ್ತದೆ ಮತ್ತು ಎಷ್ಟು ಖರ್ಚಾಗುತ್ತದೆ ಎಂಬುದನ್ನು ಪ್ರತಿಯೊಂದು ರೂಪಾಯಿಗೂ ಲೆಕ್ಕವಿಡಿ.

### 50/30/20 ನಿಯಮವನ್ನು ಬಳಸಿಕೊಂಡು ಬಜೆಟ್ ರೂಪಿಸಬಹುದು :

- 50 ಶೇಕಡಾ ಮೂಲಭೂತ ಅಗತ್ಯ ಖರ್ಚುಗಳಿಗೆ (ಬಾಡಿಗೆ, ಆಹಾರ, ವಿದ್ಯುತ್ ಮುಂತಾದವು)

- 30 ಶೇಕಡಾ ಇಚ್ಛೆಗಳಿಗಾಗಿ
- 20 ಶೇಕಡಾ ಉಳಿತಾಯ ಮತ್ತು ಸಾಲ ತೀರಿಸಲು

### ಎಮೆರ್ಜೆನ್ಸಿ ಫಂಡ್ ಇರಲಿ

ಪ್ರತಿ ವರ್ಷ ನಿಮ್ಮ ಒಟ್ಟಾರೆ ಆದಾಯ ಲೆಕ್ಕ ಹಾಕಿ. ಇದರಿಂದ ಅನಗತ್ಯ ವೆಚ್ಚಗಳು ಗೊತ್ತಾಗುತ್ತವೆ ಮತ್ತು ಉಳಿತಾಯದ ಅವಕಾಶಗಳು ಗೋಚರಿಸುತ್ತವೆ.

3 ರಿಂದ 6 ತಿಂಗಳ ಖರ್ಚುಗಳನ್ನು ಪೂರೈಸುವಷ್ಟು ತುರ್ತು ನಿಧಿ (Emergency Fund) ಹೊಂದಿರಿ. ಅನೇಕ ಮಹಿಳೆಯರು ಕಡಿಮೆ ತುರ್ತು ನಿಧಿಯನ್ನು ಹೊಂದಿರುತ್ತಾರೆ; ಈ ಅಂತರವನ್ನು ಮುಚ್ಚುವುದು ಉದ್ಯೋಗ ಕಳೆದುಕೊಳ್ಳುವ ಸಂದರ್ಭಗಳಲ್ಲಿ ಅಥವಾ ವೈದ್ಯಕೀಯ ತುರ್ತು ಪರಿಸ್ಥಿತಿಯಲ್ಲಿ ಸಹಾಯ ಮಾಡುತ್ತದೆ.

### ಸಾಲವನ್ನು ಸಮರ್ಥವಾಗಿ ನಿರ್ವಹಿಸಿ

ಶಿಕ್ಷಣ ಸಾಲ ನಿಮ್ಮ ಭವಿಷ್ಯವನ್ನು ನಿರ್ಮಿಸಲು ಸಹಾಯ ಮಾಡಬಹುದು. ಆದರೆ ಹೆಚ್ಚು ಬಡ್ಡಿ ದರದ ಕ್ರೆಡಿಟ್ ಕಾರ್ಡ್ ಸಾಲದಂತಹ ಕೆಟ್ಟ ಸಾಲಗಳು ಸಂಪತ್ತನ್ನು ಕಡಿಮೆ ಮಾಡುತ್ತವೆ. ನಿಮ್ಮ ಕ್ರೆಡಿಟ್ ಸ್ಕೋರ್‌ನ್ನು ಕಾಪಾಡಿಕೊಳ್ಳಿ, ಏಕೆಂದರೆ ಅದು ಸಾಲ, ವಿಮೆ ಮತ್ತು ಕೆಲವೊಮ್ಮೆ ಉದ್ಯೋಗ ಅವಕಾಶಗಳ ಮೇಲೂ ಪ್ರಭಾವ ಬೀರುತ್ತದೆ. ವರ್ಷಕ್ಕೊಮ್ಮೆ ನಿಮ್ಮ ಕ್ರೆಡಿಟ್ ವರದಿಯನ್ನು ಪರಿಶೀಲಿಸಿ.

ಮಹಿಳೆಯರು ಕೆಲವೊಮ್ಮೆ ವೇತನ ಹೆಚ್ಚಳ ಅಥವಾ ಸಾಲದ ಷರತ್ತುಗಳನ್ನು ಕೇಳಲು ಹಿಂಜರಿಯುತ್ತಾರೆ. ಆದರೆ ಒಂದು ಯಶಸ್ವಿ ವೇತನ ಹೆಚ್ಚಳ ದೀರ್ಘಕಾಲದಲ್ಲಿ ದೊಡ್ಡ ವ್ಯತ್ಯಾಸ ಉಂಟುಮಾಡಬಹುದು.

### ಹೂಡಿಕೆ ಮಾಡುವುದು ಅಗತ್ಯ

ಹೂಡಿಕೆ ಮಾಡುವುದರಲ್ಲಿ ಅನೇಕ ಮಹಿಳೆಯರು ಹಿಂಜರಿಯುತ್ತಾರೆ, ಇದು ಬಹಳ ಮುಖ್ಯ. 25ನೇ ವಯಸ್ಸಿನಲ್ಲಿ ಹೂಡಿಕೆ ಆರಂಭಿಸುವುದು 35ರಲ್ಲಿ ಆರಂಭಿಸುವುದಕ್ಕಿಂತ ನಿವೃತ್ತಿಯ ವೇಳೆಗೆ ಲಕ್ಷಾಂತರ ಹೆಚ್ಚುವರಿ ರೂಪಾಯಿ ತರುತ್ತದೆ.

ಷೇರುಗಳು, ಬಾಂಡ್‌ಗಳು, ಮ್ಯೂಚುವಲ್ ಫಂಡ್‌ಗಳು ಅಥವಾ ಇಂಡೆಕ್ಸ್ ಫಂಡ್‌ಗಳಂತಹ ವಿವಿಧ ಆಯ್ಕೆಗಳಲ್ಲಿ ಹೂಡಿಕೆ ಮಾಡಿ. ಮಹಿಳೆಯರು ಸಾಮಾನ್ಯವಾಗಿ ಸುರಕ್ಷಿತ ಹೂಡಿಕೆಗಳನ್ನು ಆಯ್ಕೆ ಮಾಡುತ್ತಾರೆ, ಆದರೆ ಸಂಶೋಧನೆಗಳು ತೋರಿಸುವಂತೆ ಅವರು ದೀರ್ಘಕಾಲದ ಶಿಸ್ತುಬದ್ಧ ಹೂಡಿಕೆಗಳಿಂದ ಪುರುಷರಿಗಿಂತ ಉತ್ತಮ ಫಲಿತಾಂಶಗಳಿಸುತ್ತಾರೆ.

ನಿವೃತ್ತಿ ಯೋಜನೆಗಳಿಗೆ ನಿಯಮಿತವಾಗಿ ಹಣ ಉಳಿಸಿ. ನಿಮ್ಮ ಆದಾಯದ ಕನಿಷ್ಠ 25 ಶೇಕಡಾ ಉಳಿತಾಯ ಮಾಡುವ ಗುರಿ ಇಡಿ. ಗರ್ಭಧಾರಣೆ ಅಥವಾ ಮಗುವಾದ ನಂತರ ಕುಟುಂಬದ ಜವಾಬ್ದಾರಿಗಳಿಂದ ವಿರಾಮ ಪಡೆದರೂ



ನಂತರ ಮತ್ತೆ ಹೂಡಿಕೆಯನ್ನು ಆರಂಭಿಸಿ.

### ಭದ್ರತೆ ಮತ್ತು ಯೋಜನೆ

ಜೀವನ ವಿಮೆ, ಆರೋಗ್ಯ ವಿಮೆ ಮತ್ತು ವಿಶೇಷಚೇತನ ವಿಮೆಗಳು ನಿಮ್ಮ ಕುಟುಂಬದ ಭದ್ರತೆಯನ್ನು ಕಾಪಾಡುತ್ತವೆ. ಮದುವೆ, ವಿಚ್ಛೇದನ ಅಥವಾ ಮಗುವಿನ ಜನನದ ನಂತರ ನಿಮ್ಮ ನಾಮಿನಿ ಹೆಸರುಗಳನ್ನು ಪರಿಶೀಲಿಸಿ.

ಹಲವು ಮಹಿಳೆಯರು ಮದುವೆಯಾದ ನಂತರ ಜಂಟಿ ಖಾತೆಗಳು ಅಥವಾ ಸಂಗಾತಿಯ ಪಿಂಚಣಿ ಕುರಿತು ತಿಳಿಯದಿರುತ್ತಾರೆ. ಆದ್ದರಿಂದ ಕುಟುಂಬದ ಹಣಕಾಸಿನ ವಿಷಯಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದು ಮುಖ್ಯ.

ಒಂದು ವಿಲ್, ಪವರ್ ಆಫ್ ಅಟಾರ್ನಿ ಮತ್ತು ಹೆಲ್ತ್ ಕೇರ್ ನಿರ್ದೇಶನಗಳನ್ನು ತಯಾರಿಸಿಕೊಳ್ಳಿ. ಮಕ್ಕಳಿರುವ ಅಥವಾ ಹೆಚ್ಚಿನ ಆಸ್ತಿಯಿರುವವರಿಗೆ ಟ್ರಸ್ಟ್ ವ್ಯವಸ್ಥೆಯೂ ಉಪಯುಕ್ತವಾಗಬಹುದು.

### ನಿಮ್ಮ ಮೇಲೆ ಹೂಡಿಕೆ ಮಾಡಿ

ಕಚೇರಿಯಲ್ಲಿ ವೇತನ ಹೆಚ್ಚಳಕ್ಕೆ ಮಾತುಕತೆ ನಡೆಸಿ, ಹೊಸ ಕೌಶಲ್ಯಗಳನ್ನು ಕಲಿಯಿರಿ, ಹೆಚ್ಚುವರಿ ಆದಾಯ ಮಾರ್ಗಗಳನ್ನು ಹುಡುಕಿ. ಪುಸ್ತಕಗಳು, ಪಾಡ್‌ಕಾಸ್ಟ್‌ಗಳು ಮತ್ತು ಉಚಿತ ಆನ್‌ಲೈನ್ ಸಂಪನ್ಮೂಲಗಳ ಮೂಲಕ ನಿರಂತರವಾಗಿ ಹಣಕಾಸಿನ ಜ್ಞಾನವನ್ನು ಹೆಚ್ಚಿಸಿಕೊಳ್ಳಿ.

**ಆರ್ಥಿಕ ಸ್ವಾತಂತ್ರ್ಯ ಸಂಪೂರ್ಣತೆಯ ಬಗ್ಗೆ ನಿರಂತರ ಪ್ರಗತಿ ಬಗ್ಗೆ**

- **30ರ ವಯಸ್ಸಿನೊಳಗೆ :** ಸಾಲ ತೀರಿಸುವುದು ಮತ್ತು ನಿವೃತ್ತಿ ಉಳಿತಾಯ ಆರಂಭಿಸುವುದು
- **40ರ ವೇಳೆಗೆ :** ಉಳಿತಾಯ ಮತ್ತು ಭದ್ರತೆಯನ್ನು ಹೆಚ್ಚಿಸುವುದು
- **50ರ ನಂತರ :** ಆರೋಗ್ಯ ಮತ್ತು ಸಾಂಪ್ರದಾಯಿಕ ಯೋಜನೆ ಬಗ್ಗೆ ಗಮನ ಮಹಿಳೆಯರು ಆರ್ಥಿಕವಾಗಿ ಸಮೃದ್ಧರಾದರೆ ಕುಟುಂಬ ಮತ್ತು ಸಮಾಜವೂ ಜೊತೆಗೆ ಪ್ರಗತಿಯಾಗುತ್ತದೆ.

# ಎರಡೂವರೆ ದಶಕಗಳ ಸಾರ್ಥಕ ಸೇವೆಯಲ್ಲಿ ಮಹಿಳೆಯ ಆರ್ಥಿಕ, ಸಾಮಾಜಿಕ ಸಬಲೀಕರಣದಲ್ಲಿ ಕರ್ನಾಟಕ ಮಹಿಳಾ ಸಹಕಾರ ಬ್ಯಾಂಕ್ ನಿ., ಚಿಕ್ಕಮಗಳೂರು

ಕರ್ನಾಟಕ ರಾಜ್ಯದ ಸಹಕಾರ ಚಳುವಳಿಯಲ್ಲಿ ಮಹಿಳೆಯರ ಆರ್ಥಿಕ, ಸಾಮಾಜಿಕ ಸಬಲೀಕರಣದಲ್ಲಿ ಇತರೆ ಸಹಕಾರ ಸಂಘಗಳಂತೆಯೇ ಮಹಿಳೆಯರೇ ಮುನ್ನಡೆಸುತ್ತಿರುವ ಸಹಕಾರ ಬ್ಯಾಂಕುಗಳು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುವುದರ ಮೂಲಕ ಸಹಕಾರ ಚಳುವಳಿಗೆ ಮೆರಗು ಮೂಡಿಸಿವೆ. ಮಹಿಳಾ ಬ್ಯಾಂಕುಗಳಲ್ಲಿ ಶಿಸ್ತುಬದ್ಧ ಆಡಳಿತ, ಸೇವಾಬದ್ಧತೆ, ಕ್ರಿಯಾಶೀಲತೆಯನ್ನು ಕಾಣಬಹುದಾಗಿದೆ.




ಕರ್ನಾಟಕ ಮಹಿಳಾ ಸಹಕಾರ ಬ್ಯಾಂಕ್ ನಿ., ಚಿಕ್ಕಮಗಳೂರು 1999 ರಲ್ಲಿ ಬ್ಯಾಂಕಿನ ಹಾಲಿ ಅಧ್ಯಕ್ಷರು ಹಾಗೂ ಸಂಸ್ಥಾಪಕ ಅಧ್ಯಕ್ಷರಾದ ಕು||.ಬಿ.ಸಿ.ಗೀತಾರವರ ಮುಂದಾಳತ್ವದಲ್ಲಿ ಪ್ರಾರಂಭಗೊಂಡಿದ್ದು, ಪ್ರತೀ ವರ್ಷವೂ ಹಾಕಿಕೊಂಡ ಗುರಿಯಂತೆ ಬ್ಯಾಂಕ್ ಅಭಿವೃದ್ಧಿಯತ್ತ ಸಾಗುತ್ತಾ ಬಂದಿದ್ದು, ಬ್ಯಾಂಕಿನ ಸೇವೆಯು ಪರಿಣಾಮಕಾರಿಯಾಗಿರುವುದಲ್ಲದೇ, ಇತರರಿಗೆ ಮಾದರಿ ಬ್ಯಾಂಕ್‌ಗಳಾಗಿ ಸ್ಫೂರ್ತಿಯ ಚಿಲುಮೆಗಳಾಗಿರುತ್ತದೆ. ಇಂತಹ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ವಿಶೇಷವಾಗಿ ಮಹಿಳೆಯರೆ ಮುನ್ನಡೆಸುತ್ತಿರುವ ಚಿಕ್ಕಮಗಳೂರು ನಗರದ ಕರ್ನಾಟಕ ಮಹಿಳಾ ಸಹಕಾರ ಬ್ಯಾಂಕ್ ಸಹಕಾರ ತತ್ವ, ಆದರ್ಶಗಳನ್ನು ಮೈಗೂಡಿಸಿಕೊಂಡು ಉತ್ತಮ ನಾಯಕತ್ವದ ಜೊತೆಗೆ ಮಹಿಳಾ ಸಬಲೀಕರಣ ಹಾಗೂ ಮಹಿಳೆಯರ ದೂರದರ್ಶಿತ್ವದ ಆರ್ಥಿಕ ಸ್ವಾವಲಂಬನೆಗೆ ಸಾಕ್ಷಿಯಾಗಿದೆ. ಈ ಸಾಕ್ಷೀಕರಣಕ್ಕೆ ಕಾರಣೀಭೂತರು ಬ್ಯಾಂಕನ್ನು ಮುನ್ನಡೆಸುತ್ತಿರುವ ಮಾನ್ಯ ಅಧ್ಯಕ್ಷರಾದ ಸಹಕಾರ ರತ್ನ ಪುರಸ್ಕೃತರು ಕು||.ಬಿ.ಸಿ.ಗೀತಾರವರು. ಇವರು ಕಳೆದ ಮೂರು ದಶಕಗಳಿಂದ ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸಹಕಾರ ರಂಗದ ಬೆಳವಣಿಗೆಗೆ ತಮ್ಮದೆ ಕೊಡುಗೆ ನೀಡಿದ್ದಾರೆ.



ಕು|| ಬಿ.ಸಿ. ಗೀತಾ
ಅಧ್ಯಕ್ಷರು

ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಿಗೆ ಹೊಂದಿಕೊಂಡಂತೆ ಮಲೆನಾಡು, ಅರೆಮಲೆನಾಡು, ಬಯಲುಸೀಮೆ ಪ್ರದೇಶಗಳಲ್ಲಿ ಇರುವ ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಲು ಕರ್ನಾಟಕ ಮಹಿಳಾ ಸಹಕಾರ ಬ್ಯಾಂಕ್ ವಿವಿಧ ಯೋಜನೆಗಳ ಅನುಷ್ಠಾನದ ಜೊತೆಗೆ ಆರ್ಥಿಕ ನೆರವನ್ನು ನೀಡುತ್ತಾ ಮಹಿಳೆಯರಲ್ಲಿ, ಮಿತವ್ಯಯ, ಗುಡಿಕೈಗಾರಿಕೆಗಳ ಸ್ಥಾಪನೆ ಮತ್ತು ಮಾರುಕಟ್ಟೆ ವಿಸ್ತರಣೆ, ಸ್ವಂತ ಉದ್ದಿಮೆಗಳನ್ನು ಪ್ರಾರಂಭಿಸಲು ಹಾಗೂ ಮಹಿಳೆಯರ ಗೃಹಕೃತ್ಯ ಬೇಡಿಕೆಗಳಿಗೆ ಅಗತ್ಯವಾದ ನೆರವನ್ನು ನೀಡುತ್ತಾ ಪ್ರಗತಿಯ ಪಥದಲ್ಲಿ ಸಾಗುತ್ತಿದೆ.

ಬ್ಯಾಂಕ್ ಪ್ರಧಾನ ಕಛೇರಿಯೊಂದಿಗೆ 2014ರಲ್ಲಿ ಕಡೂರು ಪಟ್ಟಣದಲ್ಲಿ, 2017 ರಲ್ಲಿ ಶಿವಮೊಗ್ಗ ಹಾಗೂ 2025 ರಲ್ಲಿ ಹಾಸನ ನಗರದಲ್ಲಿ ಶಾಖೆಯನ್ನು ತೆರೆಯುವುದರೊಂದಿಗೆ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲಾಯಿತು.

1999ರಲ್ಲಿ ಪ್ರಾರಂಭವಾದ ಕರ್ನಾಟಕ ಮಹಿಳಾ ಸಹಕಾರ ಬ್ಯಾಂಕ್ ದಿನಾಂಕ : 31.03.2026ಕ್ಕೆ 7272 ಸದಸ್ಯರು, ರೂ.13.05 ಕೋಟಿ ಷೇರು ಬಂಡವಾಳ, ರೂ. 350.00 ಕೋಟಿ ಠೇವಣಿ, ರೂ.231.87 ಕೋಟಿ ಸಾಲ ಮತ್ತು ಮುಂಗಡಗಳನ್ನು ನೀಡುವುದರ ಜೊತೆಗೆ ರೂ.400.00 ಕೋಟಿ ದುಡಿಯುವ ಬಂಡವಾಳದೊಂದಿಗೆ ಕಾರ್ಯನಿರ್ವಹಿಸುತ್ತಾ, ಸದರಿ ಸಾಲಿನಲ್ಲಿ ತೆರಿಗೆಯ ಮುನ್ನ ರೂ.5.85 ಕೋಟಿ ಲಾಭಗಳಿಸಿ ತೆರಿಗೆ ಪಾವತಿ ನಂತರದಲ್ಲಿ ರೂ.3.85 ಕೋಟಿ ನಿವ್ವಳ ಲಾಭಗಳಿಸುವುದರ ಮೂಲಕ ಲೆಕ್ಕಪರಿಶೋಧನೆಯಲ್ಲಿ 'ಎ' ಶ್ರೇಣಿಯನ್ನು ಪಡೆದುಕೊಂಡಿದೆ.

ರಿಸರ್ವ್ ಬ್ಯಾಂಕಿನ ಮಾನದಂಡದಂತೆ ಈ ಹಿಂದಿನ FSWM ಈಗಿನ ECBA ನ ವರ್ಗಕ್ಕೆ ಸೇರಿದ ಬ್ಯಾಂಕ್ ಆಗಿದ್ದು, ಗ್ರಾಹಕರಿಗೆ ಬ್ಯಾಂಕಿಂಗ್ ಸೇವೆಯಲ್ಲಿ ಸಾಮಾಜಿಕ ಜವಾಬ್ದಾರಿ

ಮತ್ತು ನೈತಿಕತೆಯ ಗುಣಮಟ್ಟವನ್ನು ಒದಗಿಸುವ ಉದ್ದೇಶ ಹೊಂದಿದ್ದು, ಬ್ಯಾಂಕಿನ ಠೇವಣಿಗಳನ್ನು ಸಾಲವನ್ನು ಹೆಚ್ಚಿಸುವ ಹೊಸ ಹೊಸ ಗ್ರಾಹಕರನ್ನು ಸೇರಿಸಿಕೊಂಡು ಚಾಲ್ತಿ ಮತ್ತು ಉಳಿತಾಯ ಖಾತೆಗಳನ್ನು ಹೆಚ್ಚಿಸುವ ಗುರಿಯನ್ನು ಹೊಂದಿದ್ದು, ಇದರೊಂದಿಗೆ ಬ್ಯಾಂಕಿಗೆ/ ಗ್ರಾಹಕರಿಗೆ ಸೈಬರ್ ದಾಳಿಯಿಂದ ಹೊರತಾಗಿ ಕಾರ್ಯನಿರ್ವಹಿಸುವುದರಿಂದ ಈ ಬಗ್ಗೆ ಭದ್ರತೆಯನ್ನು ಸಹ ಮಾಡಿದ್ದು, ಡಿಜಿಟಲ್ ಚಾನಲ್‌ಗಳನ್ನು ಜಾಗೃತರಾಗಿ ಉಪಯೋಗಿಸುವಂತೆ ಗ್ರಾಹಕರಿಗೆ ಸಲಹೆಗಳನ್ನು ನೀಡುತ್ತಾ ಎಲ್ಲಾ ರೀತಿಯ ಡಿಜಿಟಲ್ ಸೇವೆಗಳನ್ನು ನೀಡುವುದರೊಂದಿಗೆ ಗ್ರಾಹಕಸ್ನೇಹಿ ಬ್ಯಾಂಕ್ ಆಗಿ ಮೂರು ಜಿಲ್ಲೆಗಳಲ್ಲಿ ವಿಶ್ವಾಸಾರ್ಹ ಬ್ಯಾಂಕ್ ಆಗಿ ಜನಮನ್ನಣೆ ಪಡೆದಿರುತ್ತದೆ.

ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಉಪಾಧ್ಯಕ್ಷರಾಗಿ ಶ್ರೀಮತಿ.ಸುಧಾ ಹೆಚ್.ಆರ್, ನಿರ್ದೇಶಕರುಗಳಾಗಿ ಶ್ರೀಮತಿ. ಸುಜಾತ ಕೃಷ್ಣಮೂರ್ತಿ, ಶ್ರೀಮತಿ ಕಮಲಾ ಬಸವರಾಜು, ಶ್ರೀಮತಿ ಸೌಭಾಗ್ಯ ಗೋಪಾಲನ್, ಶ್ರೀಮತಿ ಜಯಶ್ರೀ ನಂಜರಾಜ್, ಶ್ರೀಮತಿ ಜಯಲಕ್ಷ್ಮೀ ರಾಮೇಗೌಡ ಟಿ.ಪಿ, ಶ್ರೀಮತಿ ತಾರಾ ಮೋಹನ್, ಶ್ರೀಮತಿ ಬನಶಂಕರಿ ಜೋಷಿ, ಶ್ರೀಮತಿ ಕವಿತಾ ಎಂ ರಾಹುಲ್ ನಾಯಕ್, ಶ್ರೀಮತಿ ಮೀನಾ.ಪಿ, ಶ್ರೀಮತಿ ಆಶಾ ಹೆಚ್.ಓ, ಶ್ರೀಮತಿ ಸ್ಮಿತಾ ಬಿ.ಎಂ, ಶ್ರೀಮತಿ ಸೌಜನ್ಯ ಕೆ.ಆರ್, ಶ್ರೀಮತಿ ಅರುಂಧತಿ ಹೆಚ್.ಎನ್ ಶ್ರೀಮತಿ ಸುಮ ಎಂ.ಸಿ ಇವರುಗಳಿರುತ್ತಾರೆ.

## ಪ್ರಸ್ತುತ ಬ್ಯಾಂಕ್ ತನ್ನ ಗ್ರಾಹಕರಿಗೆ ನೀಡುತ್ತಿರುವ ಸೌಲಭ್ಯಗಳು

- ಠೇವಣಿಗಳ ಮೇಲೆ ವಾಣಿಜ್ಯ ಬ್ಯಾಂಕುಗಳಿಗಿಂತ ಅಧಿಕ ಬಡ್ಡಿ ಹಾಗೂ ವಿಮಾ ಸೌಲಭ್ಯ
- ಹಿರಿಯ ನಾಗರೀಕರಿಗೆ ಒಂದು ವರ್ಷ ಮೇಲ್ಪಟ್ಟ ಅವಧಿಯ ಠೇವಣಿಗಳ ಮೇಲೆ ಶೇ.0.5 ರಂತೆ ಹೆಚ್ಚುವರಿ ಬಡ್ಡಿ
- ಬ್ಯಾಂಕಿನಲ್ಲಿ ಕೋರ್ ಬ್ಯಾಂಕಿಂಗ್ ಸೌಲಭ್ಯ
- ಗ್ರಾಹಕರಿಗೆ ಯಾವುದೇ ಶಾಖೆಯಲ್ಲಿ ವಹಿವಾಟು ನಡೆಸಲು ಅವಕಾಶ
- ಬ್ಯಾಂಕಿನ ಶಾಖೆಗಳಲ್ಲಿ ಕಡಿಮೆ ದರದ ಬಾಡಿಗೆಯಲ್ಲಿ ಲಾಕರ್ ಸೌಲಭ್ಯ
- ಬ್ಯಾಂಕಿಂಗ್‌ನಲ್ಲಿ ನವತಾಂತ್ರಿಕ ಸೇವೆಗಳಾದ NEFT, RTGS, ATM, SMS, E-Commerce, POS, ECS, DBTL (Gas Subsidy), Mobile Banking, IMPS, BBPS, UPI, API E Mandate ಮತ್ತು QR Code ಸೌಲಭ್ಯಗಳು.

## ನೀವು ಹಣವನ್ನು ಉಳಿಸಿದರೆ... ಹಣ ನಿಮ್ಮನ್ನು ಉಳಿಸುತ್ತದೆ

ಹಣವು ನಮ್ಮ ಜೀವನದ ಅಗತ್ಯಗಳನ್ನು ಪೂರೈಸುವ ಪ್ರಮುಖ ಸಾಧನವಾಗಿದೆ. ನಾವು ಗಳಿಸುವ ಆದಾಯದಲ್ಲಿ ಒಂದು ಭಾಗವನ್ನು ನಿಯಮಿತವಾಗಿ ಉಳಿಸುವ ಅಭ್ಯಾಸ ಬೆಳೆಸಿಕೊಂಡರೆ ಭವಿಷ್ಯದ ಅನಿಶ್ಚಿತ ಸಂದರ್ಭಗಳನ್ನು ಧೈರ್ಯವಾಗಿ ಎದುರಿಸಬಹುದು. ಸಣ್ಣ ಪ್ರಮಾಣದ ಉಳಿತಾಯವೂ ಕಾಲಕ್ರಮೇಣ ದೊಡ್ಡ ಮೊತ್ತವಾಗಿ ರೂಪುಗೊಳ್ಳುತ್ತದೆ.




ಅನಾರೋಗ್ಯ, ಉದ್ಯೋಗ ನಷ್ಟ, ಶಿಕ್ಷಣ ವೆಚ್ಚ ಅಥವಾ ಇತರ ತುರ್ತು ಪರಿಸ್ಥಿತಿಗಳಂತಹ ಸಂದರ್ಭಗಳಲ್ಲಿ ಉಳಿತಾಯ ಮಾಡಿದ ಹಣ ನಮ್ಮ ನೆರವಿಗೆ ಬರುತ್ತದೆ. ಸಾಲದ ಮೊರೆ ಹೋಗದೆ ಸಮಸ್ಯೆಗಳನ್ನು ಪರಿಹರಿಸಲು ಉಳಿತಾಯ ಸಹಕಾರಿಯಾಗುತ್ತದೆ.

ಆದ್ದರಿಂದ ಹಣವನ್ನು ಕೇವಲ ಖರ್ಚು ಮಾಡುವುದಕ್ಕಿಂತ ಅದನ್ನು ಸಮರ್ಪಕವಾಗಿ ನಿರ್ವಹಿಸುವುದು ಮತ್ತು ಉಳಿಸುವುದು ಅತ್ಯಂತ ಮುಖ್ಯ. ಉಳಿತಾಯವು ಆರ್ಥಿಕ ಭದ್ರತೆಯ ಜೊತೆಗೆ ಆತ್ಮವಿಶ್ವಾಸವನ್ನೂ ಹೆಚ್ಚಿಸುತ್ತದೆ. ನಿಯಮಿತ ಉಳಿತಾಯ ಮತ್ತು ಸೂಕ್ತ ಹೂಡಿಕೆಗಳಿಂದ ವ್ಯಕ್ತಿ ತನ್ನ ಭವಿಷ್ಯದ ಗುರಿಗಳಾದ ಮನೆ, ಶಿಕ್ಷಣ ಹಾಗೂ ನಿವೃತ್ತಿ ಜೀವನದ ಕನಸುಗಳನ್ನು ಸಾಕಾರಗೊಳಿಸಬಹುದು. ಆದ್ದರಿಂದ "ನೀವು ಹಣವನ್ನು ಉಳಿಸಿದರೆ ಹಣ ನಿಮ್ಮನ್ನು ಉಳಿಸುತ್ತದೆ" ಎಂಬ ಮಾತು ಜೀವನದ ಸತ್ಯವನ್ನು ಪ್ರತಿಬಿಂಬಿಸುತ್ತದೆ.

# THE MALLESWARAM CO-OPERATIVE BANK LIMITED

NO 102, 7TH CROSS, MALLESWARAM, BANGALORE-560 003. HEAD OFFICE - **(ESTD 1920)**
(Ph:080-23342713 / 23341616 – emails: mcb_mall@yahoo.com/mvm@mcbl.in)
BRANCHES: RAJAJINAGAR, VYALIKAVAL, YESHWANTHPUR, GANGANAGAR, RPC LAYOUT




| FINANCIAL POSITION AS ON 31 MARCH, 2026 un audited | |
|---|---|
| Paid up Share Capital | Rs. 25.02 Crores |
| Reserve & Other Reserves | Rs. 106.79 Crores |
| Deposits | Rs. 813.32 Crores |
| Loans & Advances | Rs. 496.67 Crores |
| Investments | Rs. 416.42 Crores |
| Working Capital | Rs. 980.12 Crores |
| Net Profit | Rs. 12.89 Crores |
| Audit grade | “A” (31.03.2025) |

- OVER 105 YEARS OF DEDICATED BANKING SERVICE
- CORE BANKING FACILITY
- DEMAND DRAFT FACILITY
- SAFE DEPOSIT LOCKERS
- ONLINE CREDIT OF DEPOSIT INTEREST
- NEFT / RTGS FACILITY
- DIRECT CLEARING FACILITY
- PRIORITY SECTOR LOANS
- CTS CHEQUE FACILITY
- DEPOSITS WITH INSURANCE COVERAGE UPTO RS.5 LAKHS
- LOWEST INTEREST RATE ON HOUSING/ OTHER LOANS FOR MAXIMUM PERIOD
- PERSONALISED CHEQUE BOOK
- GOLD LOAN UPTO 25 LAKHS
- RUPAY CARD FACILITY
- ATM FACILITY

**BOARD OF DIRECTORS :**

**PRESIDENT : SRI N M. SURESH, VICE-PRESIDENT : Y.S. KESHAVA RAJU**

**DIRECTORS:**

| | | |
|---|---|---|
| * SRI. ASHOK KUMAR C | * SRI. RAMESH B. | * SRI. ANANTHAN A. R. |
| * SRI. DR SHANKAR V | * SMT. VIJAYALAKSHMI | * LT: ANANTHAPADMANABHAN B G (27.01.2025) |
| * SRI. KUMAR R N | * SRI. VENKATESH RAO K B | * SRI . G.S.GIRISH |
| * SMT. SRIDEVI N | * SRI.VIJAYAKUMAR | * SRI. HANUMANTHARAYA R |
| * SRI CHANDRASHEKAR C | * SMT. ARUNA K. V. | * SMT. DR.VARUNI C. S. |

* SRI.GURU PRASAD M G - CHIEF EXECUTIVE OFFICER

# ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ ನಡೆದು ಬಂದ ದಾರಿ

ಸಹಕಾರ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆಗೈದ ಸಹಕಾರಿಗಳಿಗೆ ಪ್ರತೀ ವರ್ಷ ಕರ್ನಾಟಕ ರಾಜ್ಯ ಸರ್ಕಾರವು ಕೊಡಮಾಡುವ ಸಹಕಾರ ರತ್ನ ಪ್ರಶಸ್ತಿಗೆ ದಾವಣಗೆರೆ ಜಿಲ್ಲೆಯಲ್ಲಿಯೇ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲಿ ಒಂದಾದ ನಮ್ಮ "ಶ್ರೀ ಕನ್ನಿಕಾಪರಮೇಶ್ವರಿ ಕೋ–ಆಪ್. ಬ್ಯಾಂಕ್"ನ ಅಧ್ಯಕ್ಷರಾದ ಆರ್.ಜಿ. ಶ್ರೀನಿವಾಸಮೂರ್ತಿ ಇವರು ಸಹಕಾರ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆ ಮತ್ತು ಸೇವೆಯನ್ನು ಗುರುತಿಸಿ ಅಖಿಲ ಭಾರತ ಸಹಕಾರ ಸಪ್ತಾಹದ 70ನೇ ಸಮಾರೋಪ ಸಮಾರಂಭದಲ್ಲಿ ಗೌರವಾನ್ವಿತ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು, ಸಹಕಾರ ಮಂತ್ರಿಗಳಾದ ಸನ್ಮಾನ್ಯ ಶ್ರೀ ರಾಜಣ್ಣ ಕೆ.ಎನ್. ರವರು, ಭಾರಿ ಕೈಗಾರಿಕಾ ಮಂತ್ರಿಗಳಾದ ಶ್ರೀ ಎಂ.ಬಿ. ಪಾಟೀಲ್‌ರವರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಜಿ.ಟಿ. ದೇವೆಗೌಡ ರವರುಗಳು ದಿನಾಂಕ : 20.11.2023ರಂದು ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಆವರಣದಲ್ಲಿ ನಡೆದ ಸಮಾರಂಭದಲ್ಲಿ "ಸಹಕಾರ ರತ್ನ" ಪ್ರಶಸ್ತಿಯನ್ನು ಪ್ರಧಾನ ಮಾಡುವ ಮೂಲಕ ರಾಜ್ಯ ಸರ್ಕಾರವು ಗೌರವಿಸಿರುವುದು ನಮ್ಮ ದಾವಣಗೆರೆ ಜಿಲ್ಲೆಯ ಎಲ್ಲಾ ಸಹಕಾರಿ ಬಂಧುಗಳಿಗೂ, ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕ ಬಾಂಧವರೆಲ್ಲರಿಗೂ, ಸಿಬ್ಬಂದಿ ವರ್ಗದವರಿಗೂ, ಸದಸ್ಯ ಬಾಂಧವರಿಗೂ ಹಾಗೂ ಗ್ರಾಹಕ ಬಾಂಧವರಿಗೂ ಹೆಮ್ಮೆಯ ವಿಷಯವಾಗಿರುತ್ತದೆ.

ಶ್ರೀಯುತರು 1999–2000ನೇ ಸಾಲಿನಲ್ಲಿ ನಮ್ಮ ಬ್ಯಾಂಕಿನ ಆಡಳಿತ ಮಂಡಳಿಗೆ ನಿರ್ದೇಶಕರಾಗಿ ಆಯ್ಕೆಯಾಗುವ ಮೂಲಕ ಸಹಕಾರ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿ, ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಹಾಗೂ ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಆಡಳಿತ ಮಂಡಳಿಗೆ ಪತ್ತಿನ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳ ಪರವಾಗಿ ಪ್ರತಿನಿಧಿಯಾಗಿ ಸ್ಪರ್ಧಿಸಿ ನಿರ್ದೇಶಕರಾಗಿ, ಪ್ರಸ್ತುತ ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟ, ದಾವಣಗೆರೆ ಇದರ 'ಸಿ' ವರ್ಗದ ಕ್ಷೇತ್ರಕ್ಕೆ ನಿರ್ದೇಶಕರಾಗಿ ಹಾಗೂ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ, ಬೆಂಗಳೂರು ಇದರ ಪ್ರಸ್ತುತ ಆಡಳಿತ ಮಂಡಳಿ ನಿರ್ದೇಶಕ ಸ್ಥಾನಕ್ಕೆ ಆಯ್ಕೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.




**ಪೀಠಿಕೆ :** ಆರ್ಯವೈಶ್ಯ ಸಮಾಜದ ಕುಲದೇವತೆಯಾದ ಮಾತೆ ಶ್ರೀ ಕನ್ನಿಕಾಪರಮೇಶ್ವರಿ ಅಮ್ಮನವರ ದೇವಸ್ಥಾನದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಸಮಾಜದ ಜನರಲ್ಲಿ ಮಿತವ್ಯಯ ಮತ್ತು ಉಳಿತಾಯ ಮನೋಭಾವನೆಯನ್ನು ಉತ್ತೇಜಿಸುವ ಸದುದ್ದೇಶದಿಂದ, ಸಮಾಜ ಬಾಂಧವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿಸುವ ಹಾಗೂ ಆರ್ಥಿಕ ಶ್ರೇಯೋಭಿವೃದ್ಧಿಯ ಧ್ಯೇಯೋದ್ದೇಶದಿಂದ ಅಂದಿನ ಸಮಾಜದ ಗಣ್ಯರು, ಹಿತಚಿಂತಕರು, ಮಹನೀಯರುಗಳು ಸೇರಿ 1966ರಲ್ಲಿ ಹುಟ್ಟುಹಾಕಿದ ಹಣಕಾಸು ಸಂಸ್ಥೆಯೇ "ಶ್ರೀ ಕನ್ನಿಕಾಪರಮೇಶ್ವರಿ ಸುವರ್ಣ ಮಹೋತ್ಸವ ಕ್ರೆಡಿಟ್ ಕೋ–ಆಪ್. ಸೊಸೈಟಿ, ದಾವಣಗೆರೆ". ಈ ಸಂಸ್ಥೆಯು ಸಹಕಾರ ಸಂಘಗಳ ಕಾಯ್ದೆ ಮತ್ತು ಅಧಿನಿಯಮದ ಅಡಿಯಲ್ಲಿ ಅವಿಭಜಿತ ಜಿಲ್ಲೆ ಚಿತ್ರದುರ್ಗದಲ್ಲಿದ್ದ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಯಲ್ಲಿ ದಿನಾಂಕ 29.12.1966 ರಂದು ನೋಂದಣಿಯಾಗಿ ದಿನಾಂಕ 08.03.1967ರಂದು ಅಧಿಕೃತವಾಗಿ ದಾವಣಗೆರೆ ನಗರದ ಮಂಡಿಪೇಟೆಯಲ್ಲಿರುವ ರಾಜನಹಳ್ಳಿ ಲಕ್ಷ್ಮಣಶೆಟ್ಟಿ ಇವರ ಕಟ್ಟಡದಲ್ಲಿ ಲಕ್ಷ್ಮೀ ಪೂಜೆಯೊಂದಿಗೆ ಸೇವೆಯನ್ನು ಪ್ರಾರಂಭಿಸಲಾಯಿತು.

**ಸಂಸ್ಥಾಪನಾ ಆಡಳಿತ ಮಂಡಳಿ :** ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಸ್ಥಾಪಿತವಾದ ಶ್ರೀ ಕನ್ನಿಕಾರಪಮೇಶ್ವರಿ ದೇವಸ್ಥಾನ ಸುವರ್ಣ ಮಹೋತ್ಸವ ಕೋ–ಆಪ್. ಕ್ರೆಡಿಟ್ ಸೊಸೈಟಿ



**ಶ್ರೀ ಆರ್.ಜಿ. ಶ್ರೀನಿವಾಸಮೂರ್ತಿ**
**ಅಧ್ಯಕ್ಷರು**



**ಶ್ರೀ ಎ.ಎಸ್. ಸತ್ಯನಾರಾಯಣಸ್ವಾಮಿ**
**ಉಪಾಧ್ಯಕ್ಷರು**



**ಶ್ರೀ ಪ್ರಶಾಂತ್ ಪಡಗಲ್**
**ಪ್ರಧಾನ ವ್ಯವಸ್ಥಾಪಕರು**

ಲಿ., ಇದರ ಸಂಸ್ಥಾಪನಾ ಆಡಳಿತ ಮಂಡಳಿಯಲ್ಲಿ ದಾವಣಗೆರೆ ನಗರದ ಹೆಸರಾಂತ ಉದ್ಯಮಿಯಾದ ಶ್ರೀ ಆರ್.ಆರ್. ಶ್ರೀನಿವಾಸಮೂರ್ತಿಯವರು ಅಧ್ಯಕ್ಷರಾಗಿ, ಶ್ರೀ ಕಾಸಲ್ ಎಸ್. ವಿಠ್ಠಲ್‌ರವರು ಸಂಸ್ಥಾಪಕ ಕಾರ್ಯದರ್ಶಿಯಾಗಿ, ಧರ್ಮರತ್ನಾಕರ ಶ್ರೀ ರಾಜನಹಳ್ಳಿ ಮುದ್ದೂರಾಯಪ್ಪನವರು, ಶ್ರೀ ಚನ್ನಗಿರಿ ರಂಗಪ್ಪನವರು, ಶ್ರೀ ಚ.ಲ. ಪರಮೇಶ್ವರ ಗುಪ್ತರವರು, ಶ್ರೀ ಅಪ್ಪಾಜಪ್ಪನವರ ಶ್ರೀನಿವಾಸ ಶೆಟ್ರು, ಶ್ರೀ ಅಜ್ಜಂಪುರ ಗೋವಿಂದಸ್ವಾಮಿ ಶೆಟ್ರು, ಶ್ರೀ ರಾಜನಹಳ್ಳಿ ಸುಬ್ರಮಣ್ಯ ಶೆಟ್ರು ಮತ್ತು ಶ್ರೀ ಪಳುವಳ್ಳಿ ರಾಮಕೃಷ್ಣ ಶೆಟ್ರು ಇವರುಗಳನ್ನೊಳಗೊಂಡ ಆಡಳಿತ ಮಂಡಳಿಯಿಂದ ಸ್ಥಾಪನೆಗೊಂಡ ಸಂಘದ 9ನೇ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಉಪವಿಧಿಗಳಿಗೆ ತಿದ್ದುಪಡಿ ತಂದು "ಶ್ರೀ ಕನ್ನಿಕಾಪರಮೇಶ್ವರಿ ಕೋ–ಆಪ್. ಬ್ಯಾಂಕ್ ಲಿ., ದಾವಣಗೆರೆ" ಎಂದು ಪರಿವರ್ತನೆ ಮಾಡಿಕೊಂಡು ತಾತ್ಕಾಲಿಕ ಲೈಸನ್ಸ್ ಅಡಿಯಲ್ಲಿ 1976–77ನೇ ಸಾಲಿನಿಂದಲೇ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸಿಕೊಂಡು ಬರಲಾಗುತ್ತಿತ್ತು. ಬ್ಯಾಂಕಿನ ಆರ್ಥಿಕ ವ್ಯವಹಾರಗಳನ್ನು, ನಿವ್ವಳ ಲಾಭದ ಪ್ರಗತಿಯನ್ನು ಹಾಗೂ ಆರ್ಥಿಕ ಸಭಲತೆಯನ್ನು ಮನಗಂಡ ಭಾರತೀಯ ರಿಜರ್ವ್ ಬ್ಯಾಂಕ್ ದಿನಾಂಕ : 22.10.1990 ರಂದು ಅಧಿಕೃತವಾಗಿ ಬ್ಯಾಂಕಿಂಗ್ ವ್ಯವಹಾರದ ಲೈಸನ್ಸ್ ಅನ್ನು ನೀಡಿರುತ್ತಾರೆ.

**ರಜತ ಮಹೋತ್ಸವ :** ನಮ್ಮ ಹಣಕಾಸು ಸಂಸ್ಥೆಯು ಹುಟ್ಟಿ 25 ವರ್ಷಗಳು ಸಂದ ಸುಸಂದರ್ಭದ ಸವಿ ನೆನಪಿಗಾಗಿ "ರಜತ ಮಹೋತ್ಸವ" ಸಂಭ್ರಮವನ್ನು ಮಲ್ಲಾಡಿಹಳ್ಳಿಯ ಅನಂತ ಸೇವಾಶ್ರಮ ಟ್ರಸ್ಟಿನ ಶ್ರೀ ಶ್ರೀ ಶ್ರೀ ರಾಘವೇಂದ್ರ ಸ್ವಾಮೀಜಿ ಇವರ ದಿವ್ಯ ಸಾನಿಧ್ಯದಲ್ಲಿ ಅದ್ದೂರಿಯಾಗಿ ನೆರವೇರಿಸಲಾಯಿತು. ಈ ಶುಭ ಸಂದರ್ಭದಲ್ಲಿ "ರಜತ ಮಹೋತ್ಸವ ಕ್ಯಾಷ್ ಸರ್ಟಿಫಿಕೇಟ್" ಎಂಬ ನೂತನ ಠೇವಣಿ ಯೋಜನೆಯನ್ನು ಸಾರ್ವಜನಿಕರಿಗಾಗಿ ಬಿಡುಗಡೆ ಮಾಡಲಾಯಿತು. ಈ ಠೇವಣಿ ಯೋಜನೆಯ ಅಡಿಯಲ್ಲಿ ದಿನಾಂಕ 27.10.2017ರವರೆಗೆ ಒಟ್ಟು ಠೇವಣಿ ರೂ.32,63,96,000/–ಗಳನ್ನು ಸಂಗ್ರಹಿಸಲಾಗಿರುತ್ತದೆ.

**ಗಣಕೀಕರಣ :** ಬದಲಾದ ಬ್ಯಾಂಕಿಂಗ್ ವ್ಯವಹಾರಗಳಿಗೆ ಸಂಬಂಧಿಸಿದಂತೆ ಗ್ರಾಹಕರ ಎಲ್ಲಾ ಮಾಹಿತಿಗಳನ್ನು ಮತ್ತು ಲೆಕ್ಕ–ಪತ್ರಗಳನ್ನು ಗಣಕೀಕೃತಗೊಳಿಸಲು ದಿನಾಂಕ 04.06.1999 ರಂದು ಲಕ್ಷ್ಮೀ ಸರಸ್ವತಿ ಪೂಜೆಯೊಂದಿಗೆ ಪೂರ್ವಭಾವಿ ಕೆಲಸ–ಕಾರ್ಯಗಳನ್ನು ಪ್ರಾರಂಭಿಸಲಾಯಿತು.

**ನಿವೇಶನ ಮತ್ತು ಕಟ್ಟಡ ನಿರ್ಮಾಣ :** ಬ್ಯಾಂಕು ಸ್ವಂತ ಕಟ್ಟಡವನ್ನು ಹೊಂದಬೇಕೆಂಬ ಸದಸ್ಯರ ಅಭಿಲಾಷೆ ಮತ್ತು ಅಪೇಕ್ಷೆ ಮೇರೆಗೆ 1998–99ನೇ ಸಾಲಿನಲ್ಲಿ ಅಧ್ಯಕ್ಷರಾಗಿದ್ದ ಶ್ರೀ ಕಾಸಲ್ ಎಸ್. ಸತೀಶ್ ಇವರ ಮಹತ್ವಾಕಾಂಕ್ಷೆಯ ಮೇರೆಗೆ ದಾವಣಗೆರೆ ನಗರದ ಹೃದಯ ಭಾಗದಲ್ಲಿರುವ ಪ್ರತಿಷ್ಠಿತ "ಪ್ರಿನ್ಸ್ ಜಯಚಾಮರಾಜೇಂದ್ರ ಒಡೆಯರ್ ಬಡಾವಣೆ"ಯ 3ನೇ ಮುಖ್ಯ ರಸ್ತೆಯಲ್ಲಿ 2702 ಚದುರ ಅಡಿ ವಿಸ್ತೀರ್ಣದ ನಿವೇಶನವನ್ನು ದಿನಾಂಕ : 16.12.1999 ರಂದು ಖರೀದಿಸಿ ದಿನಾಂಕ : 09.08.2001 ರಂದು ಉದ್ದೇಶಿತ ಕಟ್ಟಡದ ಭೂಮಿ ಪೂಜೆ ಕಾರ್ಯಕ್ರಮವನ್ನು ನೆರವೇರಿಸುವ ಮೂಲಕ ಕಟ್ಟಡದ ನಿರ್ಮಾಣಕ್ಕೆ ಚಾಲನೆ ನೀಡಲಾಗಿರುತ್ತದೆ.

**ಕಟ್ಟಡದ ಉದ್ಘಾಟನೆ :** ಶ್ರೀ ಕಾಸಲ್ ಎಸ್. ಸತೀಶ್‌ರವರು ಕಟ್ಟಡದ ಛೇರ್ಮನ್‌ರಾಗಿ ಕಟ್ಟಡದ ಮೇಲ್ವಿಚಾರಣೆಯನ್ನು ನಡೆಸಿ ಭವ್ಯವಾದ ಕಟ್ಟಡವನ್ನು ಸುಂದರ ಒಳಾಂಗಣದೊಂದಿಗೆ ಪೂರ್ಣಗೊಳಿಸಿದ ನಂತರ ಶ್ರೀ ಆರ್.ಎಲ್. ಪ್ರಭಾಕರ್ ಇವರ ಅಧ್ಯಕ್ಷತೆ ಹಾಗೂ ಶ್ರೀ ಎ.ಎಸ್. ಸತ್ಯನಾರಾಯಣ ಸ್ವಾಮಿ ಇವರುಗಳ ಅವಧಿಯಲ್ಲಿ ಆರ್ಯವೈಶ್ಯ ಸಮಾಜದ ಶ್ರೀ ವಾಸವಿ ವಿಶ್ವಗುರು ಪೀಠ, ಬೆಂಗಳೂರು ಇದರ ಪೀಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ಚಂದ್ರಶೇಖರಾನಂದ ಮಹಾಸ್ವಾಮಿಗಳ ಅಮೃತ ಹಸ್ತದಿಂದ ದಿನಾಂಕ 24.09.2004 ರಂದು ಭವ್ಯ

## ಪ್ರಗತಿ ಚಿತ್ರ

| ವಿವರ | ಪ್ರಾರಂಭದ ವರ್ಷ (30.06.1966) | ರಜತ ಮಹೋತ್ಸವ ವರ್ಷ (30.06.1991) | ಸುವರ್ಣ ಮಹೋತ್ಸವ ವರ್ಷ (31.03.2018) | ವಜ್ರ ಮಹೋತ್ಸವ ವರ್ಷ (31.03.2026) |
|---|---|---|---|---|
| ಸದಸ್ಯರು | 35 | 1,170 | 3252 | 3349 |
| ಷೇರು ಬಂಡವಾಳ | 23,825.00 | 7,39,950.00 | 2,38,99,000.00 | 50,60,750.00 |
| ನಿಧಿಗಳು | 0.00 | 5,85,493.00 | 8,06,77,000.00 | 34,91,72,000.00 |
| ಠೇವಣಿಗಳು | 5,000.00 | 1,59,12,565.00 | 80,36,61,000.00 | 2,05,87,04,000.00 |
| ಸಾಲ-ಮುಂಗಡಗಳು | 0.00 | 1,10,86,000.00 | 57,24,43,000.00 | 1,61,45,27,000.00 |
| ದುಡಿಯುವ ಬಂಡವಾಳ | 30,000.00 | 1,94,93,000.00 | 94,31,06,000.00 | 251,56,71,000.00 |
| ನಿವ್ವಳ ಲಾಭ | 0.00 | 6,03,564.00 | 1,60,53,000.00 | 5,75,90,312.12 |
| ಲಾಭಾಂಶ | 0.00 | 15% | 15% | 18% (ಸೂಚಿತ) |
| ಸಿ.ಆರ್.ಎ.ಆರ್. | 0.00 | 0.00 | 15.88 | 22.53 |
| ನೆಟ್ ಎನ್.ಪಿ.ಎ. | 0.00 | 0.00 | 1.19 | 0.19 |

ಕಟ್ಟಡವನ್ನು ಉದ್ಘಾಟಿಸುವ ಮೂಲಕ ಸಾರ್ವಜನಿಕರ ಸೇವೆಗೆ ಸಮರ್ಪಿಸಲಾಯಿತು.

**ಸೇವಾ ಸೌಲಭ್ಯಗಳು :** ಬ್ಯಾಂಕಿನ ಗ್ರಾಹಕರುಗಳಿಗೆ ಮತ್ತು ಸದಸ್ಯರುಗಳಿಗೆ ಸುಲಭ ಹಾಗೂ ಉತ್ತಮ ಬ್ಯಾಂಕಿಂಗ್ ಸೇವೆಯನ್ನು ತ್ವರಿತವಾಗಿ ನೀಡಲು ದಿನಾಂಕ 04.05.2014 ರಂದು "ಸಿ.ಬಿ.ಎಸ್. ತಂತ್ರಾಂಶ"ವನ್ನು ಅಳವಡಿಸಿಕೊಳ್ಳಲಾಯಿತು. ಇದೇ ಸಂದರ್ಭದಲ್ಲಿ ನಗರದ ಪ್ರತಿಷ್ಠಿತ ಬಡಾವಣೆಯ 3ನೇ ಮುಖ್ಯ ರಸ್ತೆಗೆ "ಶ್ರೀ ವಾಸವಿ ರಸ್ತೆ" ಎಂದು ದಾವಣಗೆರೆ ಮಹಾನಗರ ಪಾಲಿಕೆ, ದಾವಣಗೆರೆ ಇವರ ಅನುಮೋದನೆಯೊಂದಿಗೆ ಅಧಿಕೃತವಾಗಿ ಉದ್ಘಾಟಿಸಲಾಯಿತು.

**ಶಾಖೆಗಳು ಹಾಗೂ ಶಾಖೆಗಳಿಗಾಗಿ ನಿವೇಶನ ಖರೀದಿ :** ಶ್ರೀ ಆರ್.ಜಿ. ಶ್ರೀನಿವಾಸಮೂರ್ತಿ ಇವರ ಅಧ್ಯಕ್ಷತಾ ಅವಧಿಯಲ್ಲಿ ಭಾರತೀಯ ರಿಜರ್ವ್ ಬ್ಯಾಂಕಿನ ಅನುಮತಿಯೊಂದಿಗೆ ಎರಡನೇ ಶಾಖೆಯನ್ನು ದಾವಣಗೆರೆ ನಗರದ ಎಂ.ಜಿ. ರಸ್ತೆಯಲ್ಲಿ ದಿನಾಂಕ : 25.01.2015 ರಂದು, ಮೂರನೇ ಶಾಖೆಯನ್ನು ಚನ್ನಗಿರಿ ಪಟ್ಟಣದಲ್ಲಿ ದಿನಾಂಕ : 08.05.2016 ರಂದು ಮತ್ತು ನಾಲ್ಕನೇ ಶಾಖೆಯನ್ನು ಬ್ಯಾಂಕಿನ ಸುವರ್ಣ ಮಹೋತ್ಸವದ ಸವಿ ನೆನಪಿಗಾಗಿ ಹರಪನಹಳ್ಳಿ ಪಟ್ಟಣದಲ್ಲಿ ದಿನಾಂಕ : 13.08.2017ರಂದು ಸಾರ್ವಜನಿಕರ ಸೇವೆಗೆ ಸಮರ್ಪಿಸಲಾಗಿದೆ. ಸುವರ್ಣ ಮಹೋತ್ಸವ ಸಂಭ್ರಮವನ್ನು ದಿನಾಂಕ : 27.10.2017ರ ಶುಕ್ರವಾರ ಮತ್ತು ದಿನಾಂಕ : 28.10.2017ರ ಶನಿವಾರದಂದು ಅದ್ದೂರಿಯಾಗಿ ಮತ್ತು ವಿಜೃಂಭಣೆಯಿಂದ ನಡೆದ ಎರಡು ದಿನಗಳ ಸಂಭ್ರಮದ ಕಾರ್ಯಕ್ರಮದಲ್ಲಿ ಬ್ಯಾಂಕಿನ ಮಾಜಿ ಪದಾಧಿಕಾರಿಗಳಿಗೆ, ಮಾಜಿ ನಿರ್ದೇಶಕರುಗಳಿಗೆ, ಹಿರಿಯ ಸದಸ್ಯ ಬಾಂಧವರಿಗೆ ಹಾಗೂ ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸಹಕಾರಿ ಬಂಧುಗಳಿಗೆ ಗೌರವ ಪ್ರಧಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಸುವರ್ಣ ಮಹೋತ್ಸವ ಸಂಭ್ರಮದ ಸವಿ ನೆನಪಿಗಾಗಿ ಶ್ರೀಯುತ ರಾ.ಲ. ಪುರುಷೋತ್ತಮ್ ಇವರ ಸಂಪಾದಕೀಯದಲ್ಲಿ "ಸುವರ್ಣ ಕನ್ನಿಕೆ" ಎಂಬ ಸ್ಮರಣ ಸಂಚಿಕೆಯನ್ನು ಹಾಗೂ ಸುವರ್ಣ ಮಹೋತ್ಸವದ ಅಂಗವಾಗಿ ನೂತನ "ಸುವರ್ಣ ಕನ್ನಿಕಾ ಠೇವಣಿ"ಯ ವಿಶೇಷ ಯೋಜನೆಯನ್ನು ಸಾರ್ವಜನಿಕರಿಗೆ ಸಮರ್ಪಿಸಲಾಯಿತು. ಈ ಠೇವಣಿ ಯೋಜನೆಯಲ್ಲಿ ಪ್ರಾರಂಭಿಕವಾಗಿ ರೂ.1,00,000/-ಗಳ ಠೇವಣಿ ಮಾಡಿದ ಠೇವಣಿದಾರರಿಗೆ "ಸುವರ್ಣ ಮಹೋತ್ಸವ ಪ್ರಶಂಸಾ ಪ್ರೋತ್ಸಾಹ ಪತ್ರ"ವನ್ನು ಅಭಿಮಾನ ಪೂರಕವಾಗಿ ನೀಡಿ ಗೌರವಿಸಲಾಗಿರುತ್ತದೆ.

**ಸಿಂಹಾವಲೋಕನ :** ನಮ್ಮ ಬ್ಯಾಂಕು ಮೂಲತಃ "ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನ ಸುವರ್ಣ ಮಹೋತ್ಸವ ಕೋ-ಆಪ್. ಕ್ರೆಡಿಟ್ ಸೊಸೈಟಿ ಲಿ.," ಆಗಿ ಪ್ರಾರಂಭಗೊಂಡು ನಂತರ ಬ್ಯಾಂಕಾಗಿ ಪರಿವರ್ತನೆಯಾದ ನಂತರ ರಜತ ಮಹೋತ್ಸವ, ಸುವರ್ಣ ಮಹೋತ್ಸವ ಮತ್ತು ವಜ್ರ ಮಹೋತ್ಸವ ವರ್ಷದಲ್ಲಿ ಬ್ಯಾಂಕಿನ ಸಿಂಹಾವಲೋಕನದ ವಿವರಗಳು.

Reserve Bank Licence No. : UBDKA-965 Dt. 10-2-1988
Reg.No. 22452/1962 Dtd.: 19-01-1962

ಸ್ಥಾಪನೆ : 1922

## ದಿ. ಅಕ್ಕಿ-ಆಲೂರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.

ತಾ।। ಹಾನಗಲ್ಲ **ಅಕ್ಕಿ-ಆಲೂರ** ಜಿ।। ಹಾವೇರಿ

## THE AKKI-ALUR URBAN CO-OPERATIVE BANK LTD.

Tq. : Hangal **AKKI-ALUR - 581102** Dist : Haveri

ದೂರವಾಣಿ : 08379 - 261238 / 261838 ಇ-ಮೇಲ್: ceo@akkialururbanbank.com ವೆಬ್ ಸೈಟ್: www.akkialururbanbank.com

**Bank's Position as on 31.03.2026**

| SI No | Particular | Amt In Lakh |
|---|---|---|
| 1 | ShareCapital | 80.26 |
| 2 | Deposits | 1295.51 |
| 3 | WorkingCapital | 1879.10 |
| 4 | Loans And Advances | 810.02 |
| 5 | Total Investments | 859.52 |
| 6 | Reserve And Other Funds | 372.66 |
| 7 | NetNPA% | 0% |
| 8 | Net Profit | 60.37 |
| 9 | CRAR % | 46% |

**Board Of Director**

| S.No | Name | Designation |
|---|---|---|
| 1 | Shri.Shanamukhappa S Muchchandi | Chairman |
| 2 | Shri.Shidramappa M Virupannanavar | Vice- Chairman |
| 3 | Shri.Veerabhadrappa V Uppin | Director |
| 4 | Shri.Mallikarjun M Kambali | Director |
| 5 | Shri.Totappa V Tuppad | Director |
| 6 | Smt.Shakuntala U Kubihal | Director |
| 7 | Shri.Kotturbasappa C Bellad | Director |
| 8 | Shri.Jagannath P Babaji | Director |
| 9 | Shri.Basavaraj M Kori | Director |
| 10 | Shri.Banappa H Lamani | Director |
| 11 | Smt.Sujata S Pasarad | Director |
| 12 | Smt.Vidya P Mirji | Director |
| 13 | Smt.Kavita F Kanneshwar | Director |
| 14 | Shri.Shivayogi S Jabin | Professional Director |
| 15 | Shri.Girisha M Kundapur | Professional Director |
| 16 | Shri.Shivayogi S Bammigatti | CEO |

| S.No | Interest Rate Of Deposits In | Percentage (%) |
|---|---|---|
| 1 | 30 TO 45 DAYS | 4.50 |
| 2 | 46 TO 90 DAYS | 5.50 |
| 3 | 91 TO 180 DAYS | 6.00 |
| 4 | 181 TO 364 DAYS | 6.25 |
| 5 | 1 YEAR ABOVE | 7.00 |

**1% EXTRA INTEREST FOR SENIOR CITIZEN**

# ಸೈಬರ್ ವಂಚನೆ ತಡೆಯಲು ಈ 5 ಸರಳ ನಿಯಮಗಳನ್ನು ಪಾಲಿಸಿ

**ಬೆಂಗಳೂರು :** ತಂತ್ರಜ್ಞಾನ ಬೆಳೆದಂತೆ ಸೈಬರ್ ಅಪರಾಧಗಳ ಸಂಖ್ಯೆಯೂ ಗಣನೀಯವಾಗಿ ಹೆಚ್ಚುತ್ತಿದೆ. ಸಣ್ಣ ಅಜಾಗರೂಕತೆಯೂ ನಿಮ್ಮ ಬ್ಯಾಂಕ್ ಖಾತೆಯನ್ನು ಕ್ಷಣಾರ್ಧದಲ್ಲಿ ಖಾಲಿ ಮಾಡಬಹುದು. ಸಾರ್ವಜನಿಕರು ತಮ್ಮ ಕಷ್ಟಾರ್ಜಿತ ಹಣವನ್ನು ಸೈಬರ್ ಕಳ್ಳರಿಂದ ರಕ್ಷಿಸಿಕೊಳ್ಳಲು ಈ ಕೆಳಗಿನ ಐದು ಸರಳ ಹಾಗೂ ಅತಿ ಮುಖ್ಯ ನಿಯಮಗಳನ್ನು ಪಾಲಿಸುವುದು ಅನಿವಾರ್ಯವಾಗಿದೆ.



### 1. ಅಪರಿಚಿತ ಲಿಂಕ್‌ಗಳ ಮೇಲೆ ಕ್ಲಿಕ್ ಮಾಡಬೇಡಿ




ನಿಮಗೆ ಬರುವ ಎಸ್‌ಎಂಎಸ್ (SMS), ವಾಟ್ಸಾಪ್ ಅಥವಾ ಇಮೇಲ್‌ಗಳಲ್ಲಿರುವ ಅನುಮಾನಾಸ್ಪದ ಲಿಂಕ್‌ಗಳನ್ನು ಎಂದಿಗೂ ಕ್ಲಿಕ್ ಮಾಡಬೇಡಿ. "ನಿಮ್ಮ ಕೆವೈಸಿ (KYC) ಅಪ್‌ಡೇಟ್ ಆಗಿಲ್ಲ", "ಲಕ್ಕಿ ಡ್ರಾದಲ್ಲಿ ಹಣ ಗೆದ್ದಿದ್ದೀರಿ" ಅಥವಾ "ಉಚಿತ ಗಿಫ್ಟ್ ಕಾರ್ಡ್" ಎಂಬಂತಹ ಆಮಿಷದ ಸಂದೇಶಗಳು ವಂಚಕರ ಜಾಲವಾಗಿರುತ್ತದೆ. ಅಧಿಕೃತ ವೆಬ್‌ಸೈಟ್‌ಗಳನ್ನು ಮಾತ್ರ ಬಳಸಿ.

### 2. ಒಟಿಪಿ ಮತ್ತು ಪಿನ್ ಹಂಚಿಕೊಳ್ಳಬೇಡಿ

ಬ್ಯಾಂಕ್ ಅಧಿಕಾರಿಗಳು ಎಂದು ಹೇಳಿಕೊಂಡು ಯಾರೇ ಕರೆ ಮಾಡಿದರೂ ನಿಮ್ಮ ಒಟಿಪಿ (OTP), ಎಟಿಎಂ ಪಿನ್ ಅಥವಾ ಪಾಸ್‌ವರ್ಡ್‌ಗಳನ್ನು ಕೇಳುವುದಿಲ್ಲ. ಇವು ಅತ್ಯಂತ ಗೌಪ್ಯ ಮಾಹಿತಿ. ಯಾವುದೇ ಸಂದರ್ಭದಲ್ಲೂ ಈ ವಿವರಗಳನ್ನು ದೂರವಾಣಿ ಕರೆ ಅಥವಾ ಸಂದೇಶಗಳ ಮೂಲಕ ಯಾರಿಗೂ ನೀಡಬೇಡಿ.




### 3. ಅಪರಿಚಿತ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಬೇಡಿ



'AnyDesk' ಅಥವಾ 'TeamViewer' ನಂತಹ ಸ್ಕ್ರೀನ್ ಶೇರಿಂಗ್ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಲು ವಂಚಕರು ಒತ್ತಾಯಿಸಬಹುದು. ಇವುಗಳನ್ನು ಬಳಸಿಕೊಂಡು ಅವರು ನಿಮ್ಮ ಮೊಬೈಲ್ ಅನ್ನು ತಮ್ಮ ನಿಯಂತ್ರಣಕ್ಕೆ ಪಡೆದು ಹಣ ಲೂಟಿ ಮಾಡುತ್ತಾರೆ. ಗೂಗಲ್ ಪ್ಲೇ ಸ್ಟೋರ್ ಅಥವಾ ಆಪಲ್ ಸ್ಟೋರ್ ಹೊರತುಪಡಿಸಿ ಬೇರೆ ಮೂಲಗಳಿಂದ ಆ್ಯಪ್‌ಗಳನ್ನು ಇನ್‌ಸ್ಟಾಲ್ ಮಾಡಬೇಡಿ.

### 4. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವಾಗ ಎಚ್ಚರ




ಹಣ ಪಡೆಯಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಅವಶ್ಯಕತೆಯಿರುವುದಿಲ್ಲ. ವಂಚಕರು "ಹಣ ಕಳುಹಿಸುತ್ತಿದ್ದೇವೆ" ಎಂದು ಹೇಳಿ ಕ್ಯೂಆರ್ ಕೋಡ್ ಕಳುಹಿಸಿ ಅದನ್ನು ಸ್ಕ್ಯಾನ್ ಮಾಡಲು ಹೇಳುತ್ತಾರೆ. ನೀವು ಸ್ಕ್ಯಾನ್ ಮಾಡಿದ ತಕ್ಷಣ ನಿಮ್ಮ ಖಾತೆಯಿಂದ ಹಣ ಕಡಿತವಾಗುತ್ತದೆ ಎಂಬುದನ್ನು ಮರೆಯದಿರಿ.

### 5. ಬಲಿಷ್ಠ ಪಾಸ್‌ವರ್ಡ್ ಮತ್ತು ದ್ವಿಮುಖ ದೃಢೀಕರಣ

ನಿಮ್ಮ ಬ್ಯಾಂಕಿಂಗ್ ಮತ್ತು ಸೋಷಿಯಲ್ ಮೀಡಿಯಾ ಖಾತೆಗಳಿಗೆ ಕಠಿಣವಾದ ಪಾಸ್‌ವರ್ಡ್ ಬಳಸಿ. ಅದಕ್ಕೂ ಮಿಗಿಲಾಗಿ 'ಟೂ-ಫ್ಯಾಕ್ಟರ್ ಅಥೆಂಟಿಕೇಶನ್' (2FA) ಸಕ್ರಿಯಗೊಳಿಸಿ. ಇದರಿಂದ ಯಾರಾದರೂ ನಿಮ್ಮ ಪಾಸ್‌ವರ್ಡ್ ಕದ್ದರೂ, ನಿಮ್ಮ ಅನುಮತಿಯಿಲ್ಲದೆ ಖಾತೆ ತೆರೆಯಲು ಸಾಧ್ಯವಾಗುವುದಿಲ್ಲ.



Dr. A.S. Harish (MD & CEO) 9916132403
Mr. Sukumar (Mutual Fund Distributor) 9886078661

Genius Financial Services
Passion to Perfection

## Genius Financial Services Pvt Ltd
(AMFI-registered Mutual Fund Distributor)

## About Our Company

30+ years experience
Founded by Dr. A.S. Harish
(Ph.D. in Finance)

Trusted partners are:

- Asset Management Companies (AMCs)
- Funds India Partner
- Kotak Securities
- Stock Holding Corporation
- Share Samadhan
- Entities offering Portfolio Management Services
- AK Capital

Diverse Financial Services:

- Depository Services
- Structured Credit Solutions (lending against investment portfolios)
- Transfer & Transmission of Shares
- Claim of Unclaimed Dividends
- Investor Education and Protection Fund Claims

CORE FOCUS AREAS: MUTUAL FUNDS & DIRECT EQUITY

## Why Choose Us?

30+ years of experience in the financial sector

Ex-bankers with deep domain expertise

No brand bias towards any particular scheme/fund.

Highly Customised Product Offerings & Personalised Client Engagement

Transaction execution platform for seamless digital access and real-time monitoring. The platforms are:

- Fundsindia
- FintsoWM (Wealth Magic)
- REDVision (Wealth Elite)
- BSE StAR MF
- Authorised Person of Kotak Securities

Office contact numbers
8088237740
7892930186

Disclaimer: At Genius Financial Services Pvt Ltd, we are under no obligation to provide investment advice, concerning any investment product for you. However, with respect to mutual fund schemes, we are AMFI registered mutual fund distributors and we endeavor to distribute only such mutual fund products which are suitable and appropriate for you, as allowed under the AMFI Guidelines or the various circulars issued thereunder. All Mutual Fund are subject to market risks. Please read all Scheme related documents carefully before investing. Past performance is not indicative of future returns.

# ಮಹಿಳಾ ಕೋ-ಆಪರೇಟಿವ್ ಬ್ಯಾಂಕ್ ಲಿ., ಶೇಷಾದ್ರಿಪುರಂ, ಬೆಂಗಳೂರು – ಬೆಳವಣಿಗೆಯ ಹಾದಿ

**ಮೂಲ :** ಮಹಿಳಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಬೆಂಗಳೂರು, 48 ವರ್ಷದ ಯುವ ಬ್ಯಾಂಕ್ ಮತ್ತು ದಿವಂಗತ. ಪಿ. ರಾಮದೇವ್, ದಿವಂಗತ ಶ್ರೀ ಕೈಲಾಸನಾಥ ಮಿಶ್ರಾ, ಮಲ್ಲೇಶ್ವರಂ ನಾಗರೀಕ ಸಮಿತಿಯ ಸಕ್ರಿಯ ಸದಸ್ಯರಾಗಿದ್ದ ಡಾ. ಶ್ರೀ ಕೆ. ನರಸಿಂಹಶೆಟ್ಟಿ, ಡಾ. ಪಿ.ಎಸ್.ವಿ. ಶೆಟ್ಟಿ ಮತ್ತು ಡಾ. ಲಕ್ಕೇಗೌಡ ಹಾಗೂ ಹಿರಿಯ ಮಹಿಳಾ ಸಹಕಾರಿಗಳಾದ ದಿವಂಗತ ಶ್ರೀಮತಿ ಎ. ಪಂಕಜಾ, ದಿ ಶ್ರೀಮತಿ ಪಿ.ವಿ. ಪಾರ್ವತಿ, ದಿ ಶ್ರೀಮತಿ ವಿಲಾಸಿನಿ ಎನ್. ಮತ್ತಿತರ ಶ್ರೇಷ್ಠ ವ್ಯಕ್ತಿಗಳ ಕನಸಿನ ಕೂಸು.

**ಮಾರ್ಗ :** ಆರಂಭಿಕ ಹಂತದಲ್ಲಿ ದಾರಿ ಸರಳವಾಗಿರಲಿಲ್ಲ ಶೇ.80 ಕ್ಕಿಂತ ಹೆಚ್ಚು ಮಹಿಳಾ ಜನಸಂಖ್ಯೆಯು ಶಿಕ್ಷಣದಿಂದ ವಂಚಿತವಾಗಿತ್ತು ಮತ್ತು ಉದ್ಯೋಗಸ್ತ ಮಹಿಳೆಯರ ಸಂಖ್ಯೆ ಕಡಿಮೆಯಾಗಿತ್ತು. ಮಹಿಳೆಯರು ಸ್ವತಂತ್ರವಾಗಿ ಬ್ಯಾಂಕಿನಲ್ಲಿ ಖಾತೆ ತೆರೆಯಲು ಶಕ್ತರಾಗಿರಲಿಲ್ಲ. ಪುರುಷರ ಬೆಂಬಲವಿಲ್ಲದೆ ಮಹಿಳೆಯರು ಏಕಾಂಗಿಯಾಗಿ ವ್ಯಾಪಾರ ಅಥವಾ ವೃತ್ತಿಯನ್ನು ಕೈಗೊಳ್ಳಲು ಸಾಧ್ಯವಿರಲಿಲ್ಲ. ಆದರೆ, ಮಹಿಳಾ ಕೋ-ಆಪರೇಟಿವ್ ಬ್ಯಾಂಕ್ ಪ್ರವರ್ತಕರು ಭರವಸೆ ಕಳೆದುಕೊಳ್ಳಲಿಲ್ಲ. ಬ್ಯಾಂಕಿನ ಕಾರ್ಯಕ್ಷೇತ್ರದ ಪ್ರತಿ ಮನೆಗೂ ಭೇಟಿ ನೀಡಿ ಕುಟುಂಬದ ಪುರುಷ ಸದಸ್ಯರ ಮನವೊಲಿಸಿ ಕುಟುಂಬದ ಮಹಿಳೆಯರನ್ನು ಬ್ಯಾಂಕ್ ಸದಸ್ಯರನ್ನಾಗಿಸಿಕೊಂಡರು. ಬ್ಯಾಂಕ್ ತನ್ನ ಪ್ರಾರಂಭದಿಂದಲೂ ಸಮಾಜದ ಆರ್ಥಿಕವಾಗಿ ದುರ್ಬಲ ವರ್ಗ ಮತ್ತು ಮಹಿಳೆಯರನ್ನು ಬ್ಯಾಂಕಿಂಗ್ ಸೇವಾ ವಲಯದ ಸೇರ್ಪಡೆಗೆ ತರಲು ಶ್ರಮಿಸುತ್ತಿದೆ.

**ಬೆಳವಣಿಗೆ :** ಎಲ್ಲಾ ವಿಷಮ ಪರಿಸ್ಥಿತಿಗಳನ್ನು ಎದುರಿಸಿ ಸ್ಥಾಪಿಸಲ್ಪಟ್ಟ ಬ್ಯಾಂಕ್ ಮತ್ತು ಅಡೆತಡೆಗಳೊಂದಿಗೆ ಬ್ಯಾಂಕ್ ಸ್ಥಾಪಿಸಲು ಮತ್ತು ಸಾರ್ವಜನಿಕರ ವಿಶ್ವಾಸವನ್ನು ಭದ್ರಪಡಿಸಿಕೊಳ್ಳಲು ಸಮರ್ಥವಾಗಿದೆ. ಕರ್ನಾಟಕ ರಾಜ್ಯದ ಮಹಿಳಾ ಬ್ಯಾಂಕ್‌ಗಳಲ್ಲಿ ಅಗ್ರಸ್ಥಾನದಲ್ಲಿದೆ ಮತ್ತು ಬೆಳೆಯುತ್ತಿದೆ. ಬ್ಯಾಂಕ್ ಪೂರ್ತಿ ಗಣಕೀಕರಣದೊಂದಿಗೆ ಹನ್ನೊಂದು ಶಾಖೆಗಳನ್ನು ಹೊಂದಿದೆ ಮತ್ತು ಅದರ ಆಡಳಿತ ಕಚೇರಿಯು ಬೆಂಗಳೂರಿನ ಶೇಷಾದ್ರಿಪುರಂನಲ್ಲಿರುವ ತನ್ನ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಬ್ಯಾಂಕ್ 76 ಮಂದಿಯ ಸಿಬ್ಬಂದಿ ಬಲವನ್ನು ಹೊಂದಿದ್ದು ಪ್ರಬುದ್ಧ ಮತ್ತು ಬೆಂಬಲಿತ ನಿರ್ದೇಶಕರ ಮಂಡಳಿಯನ್ನು ಹೊಂದಿದೆ.

**ಹಣಕಾಸು :** 31ನೇ ಮಾರ್ಚ್ 2026 ರಂತೆ, ಬ್ಯಾಂಕು 15275 ಸದಸ್ಯರನ್ನು ಹೊಂದಿದೆ, ಇದರಲ್ಲಿ 75 ಪ್ರತಿಶತ ಮಹಿಳೆಯರು ಮತ್ತು 25 ಪ್ರತಿಶತ ಪುರುಷರು, ಸ್ವಂತ ನಿಧಿಗಳು ರೂ. 29.69 ಕೋಟಿ, ಠೇವಣಿ ರೂ. 439.78 ಕೋಟಿ, ಮುಂಗಡ ರೂ.259.26 ಕೋಟಿ ಮತ್ತು ನಿವ್ವಳ ಲಾಭ ರೂ. 3.50 ಕೋಟಿ. ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಆದ್ಯತಾ ವಲಯದ ಗುರಿಯನ್ನು ಬ್ಯಾಂಕ್ ಸಾಧಿಸಿದೆ.

**ಸಾಧನೆಗಳು :** ಶಾಸನಬದ್ಧ ಲೆಕ್ಕಪರಿಶೋಧನೆಯ ಪ್ರಕಾರ ಬ್ಯಾಂಕ್ ಶ್ರೇಣಿ-"ಎ" ವರ್ಗದಲ್ಲಿದೆ ಮತ್ತು CRAR 16.75% ಅನ್ನು ನಿರ್ವಹಿಸಿದೆ ಹಾಗೂ ಶೇ. 0 ನಿವ್ವಳ ಅನುತ್ಪಾದಕ ಸಾಲ (NPA) ಮಟ್ಟವನ್ನು ಸಾಧಿಸಲಾಗಿದೆ. ಬ್ಯಾಂಕ್




ಕರ್ನಾಟಕ ರಾಜ್ಯ ಸರ್ಕಾರದಿಂದ ನಾಲ್ಕು ಬಾರಿ "ಅತ್ಯುತ್ತಮ ಬ್ಯಾಂಕ್ ಪ್ರಶಸ್ತಿ" ಪಡೆದುಕೊಂಡಿದೆ. ನಾವು ಸರ್ಕಾರಿ ಭದ್ರತೆಗಳಲ್ಲಿ ಹೂಡಿಕೆ ಮಾಡುತ್ತಿದ್ದು ಇದರಿಂದ ಉತ್ತಮ ಲಾಭವನ್ನು ಗಳಿಸಲಾಗುತ್ತಿದೆ. ದಿನಾಂಕ : 06.12.2025 ರಂದು ಗ್ಲೋಬಲ್ ಕೋ-ಆಪರೇಟಿವ್ ಡೆವಲಪ್ ಮೆಂಟ್ ಸಮ್ಮಿಟ್-2025 ಇವರು ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಸಹಕಾರಿಗಳ ವರ್ಗದಲ್ಲಿ ನಮ್ಮ ಬ್ಯಾಂಕಿಗೆ ರಾಷ್ಟ್ರೀಯ ಶ್ರೇಷ್ಠತಾ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ಉತ್ಪನ್ನಗಳು ಮತ್ತು ಸೇವೆಗಳು :** ಬ್ಯಾಂಕ್ ಪ್ರಸ್ತುತ ಉಳಿತಾಯ ಖಾತೆಗಳು, ಅವಧಿ ಠೇವಣಿ, ಮಾಸಿಕ ರಿಕರಿಂಗ್ ಠೇವಣಿ ಮತ್ತು ವೈಯಕ್ತಿಕ ಸಾಲಗಳು, ಗೃಹ ಸಾಲಗಳು, ಅಡಮಾನ ಸಾಲಗಳು, ಚಿನ್ನಾಭರಣ ಸಾಲಗಳು, ಶಿಕ್ಷಣ ಸಾಲಗಳು ಇತ್ಯಾದಿ ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬಡ್ಡಿ ದರಗಳಲ್ಲಿ ನೀಡಿ ಉತ್ತಮ ಲಾಭಗಳಿಸುತ್ತಿದೆ. ಇದಲ್ಲದೆ, ಬ್ಯಾಂಕ್ ತನ್ನ ಗ್ರಾಹಕರಿಗೆ ಆರ್‌ಟಿಜಿಎಸ್ ಮತ್ತು ಎನ್‌ಇಎಫ್‌ಟಿಯಂತಹ ಎಲೆಕ್ಟ್ರಾನಿಕ್ ಹಣ ರವಾನೆ ಸೌಲಭ್ಯಗಳು, ತ್ವರಿತ ನೇರ ಕ್ಲಿಯರಿಂಗ್ ಸೌಲಭ್ಯ, ಲಾಕರ್ ಸೌಲಭ್ಯದಂತಹ ಸೇವೆಗಳನ್ನು ಒದಗಿಸುತ್ತಿದೆ.

ಅಕ್ಟೋಬರ್ 2025 ರಿಂದ ತನ್ನ ಗ್ರಾಹಕರಿಗೆ ನಿರಂತರ ಚೆಕ್ಕು ಕ್ಲಿಯರಿಂಗ್ ಸೌಲಭ್ಯವನ್ನು ಪರಿಚಯಿಸಿರುತ್ತದೆ.

**ಸದಸ್ಯರಿಗೆ ಸೌಲಭ್ಯಗಳು :** ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾಯೋಜನೆ (PMJJBY), ಪ್ರಧಾನ ಮಂತ್ರಿ ಸುರಕ್ಷಾ ವಿಮಾಯೋಜನೆ (PMSBY), ಯಶಸ್ವಿನಿ ಯೋಜನೆ, ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ವೈದ್ಯಕೀಯ ಪ್ರಯೋಜನ, ಮರಣ ಪರಿಹಾರ ನಿಧಿ.

**ಸಿಬ್ಬಂದಿ ಸೌಲಭ್ಯಗಳು :** ವೈದ್ಯಕೀಯ ವಿಮೆ, ಹಬ್ಬದ ಮುಂಗಡ, ಬೋನಸ್, ಗ್ರಾಚ್ಯುಟಿ, ಮರಣ ಪರಿಹಾರ ನಿಧಿ, ಸಿಬ್ಬಂದಿ ಸಾಲ ಸೌಲಭ್ಯಗಳು.

**ಭವಿಷ್ಯದ ಯೋಜನೆಗಳು :** ಬ್ಯಾಂಕ್ ತನ್ನ ಕಾರ್ಯಾಚರಣೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ತನ್ನ ಗ್ರಾಹಕರಿಗೆ ಮೊಬೈಲ್ ಬ್ಯಾಂಕಿಂಗ್, UPI ಪಾವತಿ, ಡೆಬಿಟ್ ಕಾರ್ಡ್ ಮುಂತಾದ ಡಿಜಿಟಲ್ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸಲು ಯೋಜಿಸುತ್ತಿದೆ. ಬ್ಯಾಂಕಿನಲ್ಲಿ ಮೈಕ್ರೋ ಫೈನಾನ್ಸಿಂಗ್ ಒದಗಿಸಲು ಬ್ಯಾಂಕ್ ಕ್ರಮ ಕೈಗೊಂಡಿದೆ.



ಶ್ರೀಮತಿ ಗೀತಾ ಎಂ.
ಅಧ್ಯಕ್ಷರು



ಶ್ರೀಮತಿ ರೂಪವತಿ ಸಿ.
ಉಪಾಧ್ಯಕ್ಷರು

# ಆಧಾರ್ ಕಾರ್ಡ್ ವಿನ್ಯಾಸ ಬದಲಾವಣೆ

ನಿಮ್ಮ ಆಧಾರ್ ಕಾರ್ಡ್ ಶೀಘ್ರದಲ್ಲೇ ಹೊಸ ರೂಪವನ್ನು ಪಡೆಯಲಿದೆ, ನಿಮ್ಮ ವೈಯಕ್ತಿಕ ಗುರುತಿಗೆ ಬಲವಾದ ರಕ್ಷಣೆ ನೀಡಲು ಕಾರ್ಡ್ ಅನ್ನು ಹೈಟೆಕ್ ಆಗಿ ವಿನ್ಯಾಸಗೊಳಿಸಲಾಗಿದೆ. ಇದರಿಂದ ಆಧಾರ್ ಕಾರ್ಡ್ ಯಾರಿಗೆ ನೀಡಿದರೂ ಅದು ಸುರಕ್ಷಿತವಾಗಿರುತ್ತದೆ. ಏಕೆಂದರೆ ಅದರಲ್ಲಿ ಯಾವುದೇ ವಿವರಗಳನ್ನು ಪ್ರಿಂಟ್ ಮಾಡುವುದಿಲ್ಲ. ಅದರಲ್ಲಿ ನಿಮ್ಮ ಹೆಸರು, ವಿಳಾಸ, ನಂಬರ್ ಯಾವುದು ಇರುವುದಿಲ್ಲ. ಆಧಾರ್ ಕಾರ್ಡ್‌ನ ವಿನ್ಯಾಸವನ್ನೆ ಪೂರ ಬದಲಾಯಿಸಲು ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ ಮುಂದಾಗಿದ್ದು, ಮುಂದಿನ ದಿನಗಳಲ್ಲಿ ಹೊಸ ಕಾರ್ಡ್ ಬರಲಿದೆ. ಇದು ಸೇವಾ ಪೂರೈಕೆದಾರರಿಂದ ಆಧಾರ್ ಕಾರ್ಡಿನ ದುರುಪಯೋಗವಾಗುವ ಅಪಾಯವನ್ನು ಕಡಿಮೆ ಮಾಡುತ್ತದೆ ಮತ್ತು ವಂಚನೆಯ ವಿರುದ್ಧ ಸುರಕ್ಷತೆಗಳನ್ನು ನೀಡುತ್ತದೆ.

ಅಸ್ತಿತ್ವದಲ್ಲಿರುವ ಆಧಾರ್ ಕಾರ್ಡ್, ನಿಮ್ಮ ಫೋಟೋ, ಹೆಸರು, ವಿಳಾಸ ಮತ್ತು 12–ಅಂಕಿಯ ಗುರುತಿನ ಸಂಖ್ಯೆ ಸೇರಿದಂತೆ ಹಲವಾರು ವೈಯಕ್ತಿಕ ವಿವರಗಳನ್ನು ಹೊಂದಿದೆ. ಇದು ಗೌಪ್ಯತೆ ಮತ್ತು ದುರುಪಯೋಗದ ಬಗ್ಗೆ ಆತಂಕ ಉಂಟುಮಾಡಿದೆ. ಇದರಲ್ಲಿನ ಡೇಟಾ ಸೋರಿಕೆ, ಗುರುತಿನ ಕಳ್ಳತನ ಮತ್ತು ಅನಧಿಕೃತವಾಗಿ ನಿಮಗೆ ಅರಿವಿಲ್ಲದಂತೆ ಉಪಯೋಗಿಸುವ ಅಪಾಯವಿದೆ.

ಪ್ರಸ್ತಾವಿತ ಮರುವಿನ್ಯಾಸವು ವೈಯಕ್ತಿಕ ಡೇಟಾವನ್ನು ರಕ್ಷಿಸುವುದು ಪ್ರಮುಖ ಆದ್ಯತೆಯಾಗಿದೆ. ಹೀಗಾಗಿ ಕಾರ್ಡ್ ಅನ್ನು ಕನಿಷ್ಠ ವಿನ್ಯಾಸಕ್ಕೆ ಇಳಿಸುವ ಮೂಲಕ, ಪ್ರಾಥಮಿಕವಾಗಿ ಫೋಟೋ ಮತ್ತು ಸ್ಕ್ಯಾನ್ ಮಾಡಬಹುದಾದ QR ಕೋಡ್ ಅನ್ನು ಮಾತ್ರ ಮುದ್ರಿಸಲಾಗುತ್ತಿದೆ.

### ಹೇಗಿರುತ್ತದೆ ಹೊಸ ಡಿಸೈನ್?

ಪ್ರಸ್ತುತ ಕಾರ್ಡ್‌ಗೆ ಸಂಪೂರ್ಣ ವ್ಯತಿರಿಕ್ತವಾಗಿ, ಮರು ವಿನ್ಯಾಸಗೊಳಿಸಲಾದ ಕಾರ್ಡ್ ಕೇವಲ ಫೋಟೋ ಮತ್ತು QR ಕೋಡ್ ಅನ್ನು ಮಾತ್ರ ಹೊಂದಿರುತ್ತದೆ.




ಹೆಸರು, ಆಧಾರ್ ಸಂಖ್ಯೆ, ವಿಳಾಸ, ಜನ್ಮ ದಿನಾಂಕ ಮತ್ತು ಲಿಂಗದಂತಹ ಎಲ್ಲಾ ವೈಯಕ್ತಿಕ ವಿವರಗಳನ್ನು ಅದರ ಮೇಲ್ಮೈಯಲ್ಲಿ ಇನ್ನು ಮುಂದೆ ಮುದ್ರಿಸಲಾಗುವುದಿಲ್ಲ. ವೈಯಕ್ತಿಕ ವಿವರಗಳನ್ನು QR ಕೋಡ್‌ನಲ್ಲಿ ಎಂಬೆಡ್ ಮಾಡಲಾಗುತ್ತದೆ. ಇದು ವ್ಯಕ್ತಿಯ ಹೆಸರು, ಆಧಾರ್ ಸಂಖ್ಯೆ, ಜನ್ಮ ದಿನಾಂಕ, ವಿಳಾಸ, ಲಿಂಗ ಮತ್ತು ಬಯೋಮೆಟ್ರಿಕ್ ಪರಿಶೀಲನಾ ಡೇಟಾವನ್ನು ಎನ್‌ಕ್ರಿಪ್ಟ್ ಮಾಡಿದ ರೂಪದಲ್ಲಿ ಸುರಕ್ಷಿತವಾಗಿ ಸಂಗ್ರಹಿಸುತ್ತದೆ.

ಈ ಡೇಟಾಗೆ ಪ್ರವೇಶವನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲಾಗುತ್ತದೆ. ಏಕೆಂದರೆ QR ಕೋಡ್ ಅನ್ನು ಸರ್ಕಾರಿ–ಅಧಿಕೃತ ಸ್ಕ್ಯಾನರ್‌ಗಳು, UIDAI ನ ಅಧಿಕೃತ ಅಪ್ಲಿಕೇಶನ್‌ಗಳು ಅಥವಾ ಗೊತ್ತುಪಡಿಸಿದ ಪರಿಶೀಲನಾ ಸಾಧನಗಳ ಮೂಲಕ ಮಾತ್ರ ಡಿಕೋಡ್ ಮಾಡಬಹುದು. ಪರಿಣಾಮವಾಗಿ, ಹೋಟೆಲ್‌ಗಳು, ಈವೆಂಟ್ ಮ್ಯಾನೇಜರ್‌ಗಳು ಅಥವಾ ಕಚೇರಿಗಳಂತಹ ಅನಧಿಕೃತ ಘಟಕಗಳು ಕಾರ್ಡ್ ಅನ್ನು ಫೋಟೋಕಾಪಿ ಮಾಡುವ ಮೂಲಕ ವೈಯಕ್ತಿಕ ಮಾಹಿತಿಯನ್ನು ಕದಿಯಲು, ದುರುಪಯೋಗ ಮಾಡಲು ಸಾಧ್ಯವಾಗುವುದಿಲ್ಲ.

# THE BAILHONGAL URBAN CO OPERATIVE BANK LIMITED. BAILHONGAL

365/45 BAZAR ROAD BAILHONGAL-591102 Dist: Belagavi
Email: bucbho@bailhongalurbancoop.bank.in | Web: www.bailhongalurbancoop.bank.in Ph.No: 9980957487

